ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸೋಮವಾರ, ಏಪ್ರಿಲ್ 29, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 348 RNI : 27369/75

1974 2023

janathavani@mac.com
www.janathavani.com
08192 254736 91642 99999

## ಬಾವಿಕಟ್ಟೆ ಚಿಕ್ಕವೀರಪ್ಪ ನಿಧನ



ಕೂಡ್ಲಿಗಿ ತಾ. ಮರಬ ಗ್ರಾಮದ ದಾವಣಗೆರೆ ನಗರ ಆವರಗೆರೆ ವಾಸಿ ದಾವಣಗೆರೆ ಪಾರ್ವತಿ ಪ್ರಕೃತಿ ನರ್ಸರಿ ಮಾಲೀಕರಾದ

**ಶ್ರೀ ಬಾವಿಕಟ್ಟೆ ಚಿಕ್ಕವೀರಪ್ಪ**

ಇವರು ದಿನಾಂಕ 28.04.2024ರ ಭಾನುವಾರ ಬೆಳಿಗ್ಗೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.04.2024ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಕೂಡ್ಲಿಗಿ ತಾ. ಮರಬ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಪತ್ನಿ : ಶ್ರೀಮತಿ ಸರೋಜಮ್ಮ ಬಿ. ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರರು, ಬಾವಿಕಟ್ಟೆ ವಂಶಸ್ಥರು ಮರಬ ಹಾಗೂ ಬಂಧು ಮಿತ್ರರು.
ಮೊ : 94482 37377, 99452 49088

## ಆರನೇ ಪುಣ್ಯಸ್ಮರಣೆ



**ದಿ|| ಶ್ರೀ ಎನ್. ಲಿಂಗರಾಜು**

AEE, PWD, Chitradurga

ಜನನ : 06.07.1959, ಮರಣ : 29.04.2018

ಸಂತಸ ನೀಡುವ ಬಂಧುವಾಗಿ, ಆಸರೆ ನೀಡುವ ಸ್ನೇಹಿತರಾಗಿ, ಎಲ್ಲರ ಮನದೊಳಗೆ ಶಾಶ್ವತವಾಗಿ ನೆಲೆಸಿ, ಮರೆಯಾದ ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳು ಸಂದರೂ ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತ್ನಿ : ಶ್ರೀಮತಿ ರಾಧಾ ಲಿಂಗರಾಜು
ಪುತ್ರ : ಶ್ರೀ ಅವಿನಾಶ್. ಎಲ್., ಶ್ರೀಮತಿ ಶಾಲಿನಿ, ಮೊಮ್ಮಗಳು : ಹೇಮಾನ್ಯ
ಪುತ್ರಿ : ಶ್ರೀಮತಿ ಶ್ವೇತಾ ಶ್ರೀ ಹರೀಶ್, ಮೊಮ್ಮಗಳು : ತ್ರಿಷಿಕಾ,
ಹಾಗೂ ಕುಟುಂಬಸ್ಥರು

## ಹದಿಮೂರನೇ ವರ್ಷದ ಸವಿನೆನಪು



**ಲಿಂಗೈಕ್ಯ ಹೆಚ್.ಎನ್. ಷಡಾಕ್ಷರಪ್ಪನವರು**

ಸಂಸ್ಥಾಪಕ ಸಂಪಾದಕರು, ಜನತಾವಾಣಿ
ಲಿಂಗೈಕ್ಯ : 29.04.2011

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷಗಳು ಸಂದವು.
ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿ ದೀಪ...

ನಿಮ್ಮ ನೆನಪಿನಲ್ಲಿರುವ
- ಪತ್ನಿ : ಶ್ರೀಮತಿ ಜಯಶೀಲ ಹೆಚ್.ಎನ್. ಷಡಾಕ್ಷರಪ್ಪ

ಮಕ್ಕಳಾದ :
- ಶ್ರೀಮತಿ ಉಜ್ವಲ ಶ್ರೀ ಡಿ.ಜಿ. ಸುಭಾಷ್
- ಶ್ರೀಮತಿ ಡಾ|| ಸೌಜನ್ಯ ಶ್ರೀ ಡಾ|| ಮಹೇಂದ್ರಪ್ಪ, ಮೈಸೂರು.
- ಶ್ರೀಮತಿ ಡಾ|| ಪೂರ್ಣಿಮಾ ಶ್ರೀ ಡಾ|| ಪ್ರಕಾಶ್ ಸೂರಣಗಿ, ದುಬೈ.
- ಶ್ರೀ ಎಂ.ಎಸ್. ವಿಕಾಸ್, ಸಂಪಾದಕರು, ಜನತಾವಾಣಿ, ಶ್ರೀಮತಿ ನೀತಾ
- ಶ್ರೀಮತಿ ಸ್ಮರಣ ಶ್ರೀ ರವಿ ಸಜ್ಜನ, ಯುಎಸ್ಎ
- ಶ್ರೀ ಡಾ|| ಎಂ.ಎಸ್.ವಿಶ್ವಾಸ್ ಶ್ರೀಮತಿ ರಶ್ಮಿ, ಯುಎಸ್ಎ

ಮೊಮ್ಮಕ್ಕಳಾದ : ಸಿದ್ದಾರ್ಥ್, ಸಿಂಚನ್, ಸಹ್ಯಾದ್ರಿ, ರಜತಾದ್ರಿ, ಅಭಿಷೇಕ್, ಜಯಧರ, ಪ್ರೇರಣ, ರಿಯಾ, ರಿಚಾ, ಸಾನ್ವಿ, ಆರುಶ್ ಹಾಗೂ ಹೊನ್ನೇನಹಳ್ಳಿ ವಂಶಸ್ಥರು, ಮೆಳ್ಳೇಕಟ್ಟೆ ಹಾಗೂ ಬಂಧು-ಮಿತ್ರರು.
ಜನತಾವಾಣಿ ಬಳಗ.




### ಮಾತು ಮಾಣಿಕ್ಯ

ಈ ಲೋಕದೊಳಗೆ ಬಣ್ಣದ ಮಾತುಗಳೇ ಹೆಚ್ಚಾಗಿ ಮುತ್ತುಗಳಾಗಿರುತ್ತವೆ ನೇರ,ನಿಷ್ಠೂರತೆಯ, ಸತ್ಯದ ಮಾತುಗಳೇ ಮುಳ್ಳುಗಳಾಗುತ್ತವೆ. ಇದೇ ಈಗಿನ ಜನರ ಮನಸ್ಸಿನ ನಿಜವಾದ ವಾಸ್ತವವಾಗಿದೆ.

## ಮೆ|| ಉಮಾ ಟ್ರೇಡರ್ಸ್ ಮಾಲೀಕರಾದ ಎಂ.ಜಿ. ರಾಜಣ್ಣ ನಿಧನ



ದಾವಣಗೆರೆ ಹಾಸಬಾವಿ ಸರ್ಕಲ್ ಹತ್ತಿರದ ವಾಸಿ ಹೆಸರಾಂತ ವರ್ತಕರೂ, ಉಮಾ ಟ್ರೇಡರ್ಸ್ ಮಾಲೀಕರೂ ಹಾಗೂ ಮಾಜಿ ಮೇಯರ್ ದಿ|| ಶ್ರೀ ಎಂ.ಜಿ. ಬಕ್ಕೇಶ್ ಅವರ ಹಿರಿಯ ಸಹೋದರರಾದ

**ಶ್ರೀ ಎಂ.ಜಿ. ರಾಜಣ್ಣನವರು**

ದಿನಾಂಕ 28.04.2024ರ ಭಾನುವಾರ ಸಂಜೆ 4.52ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರ, ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಚಾಮರಾಜಪೇಟೆಯಲ್ಲಿರುವ ಮೃತರ ಸ್ವಗೃಹದಲ್ಲಿ ಇರಿಸಲಾಗಿದ್ದು, ದಿನಾಂಕ 29.04.2024ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 99642 30155, 98448 65986

|| ಶ್ರೀ ಶಿವ ನಾರದಮುನಿ ಪ್ರಸನ್ನ ||

## ಏಳನೇ ಪುಣ್ಯಸ್ಮರಣೆ



**ದಿ|| ಅಣಬೇರು ನಾಗರಾಜ್**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳು ಸಂದವು.
ನಿಮ್ಮ ಸರಳತೆ ಮತ್ತು ನೀವು ಅನುಸರಿಸಿದ ಸನ್ಮಾರ್ಗವೇ ನಮಗೆ ಪ್ರೇರಣೆ.
ನೀವು ತೋರಿದ ಅದಮ್ಯ ಪ್ರೀತಿಯನ್ನು ಸ್ಮರಿಸುತ್ತಾ
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ....

ತಂದೆ : ದಿ. ಶೇಖರಪ್ಪ ಅಣಬೇರು ಮತ್ತು ಮಕ್ಕಳು.
ತಾಯಿ : ಬಸಮ್ಮ ಶೇಖರಪ್ಪ ಅಣಬೇರು.
ಪತ್ನಿ : ಪಾರ್ವತಿ ನಾಗರಾಜ್ ಅಣಬೇರು.
ಪುತ್ರ : ಅಭಿಷೇಕ್ ಅಣಬೇರು. ಪುತ್ರಿ : ಅನುಶ್ರೀ ಅಣಬೇರು.

ಮಾಳಿಗೇರ ವಂಶಸ್ಥರು, ಅಣಬೇರು.

# ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್‌ಗೆ ಭಾರೀ ಬೆಂಬಲ : ಕುರಿ ನೀಡಿ ಸಂಭ್ರಮಿಸಿದ ಗ್ರಾಮಸ್ಥರು



ಜಗಳೂರು, ಏ. 28 - ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ಮತಯಾಚನೆ ನಡೆಸಿದರು.

ಸೊಕ್ಕೆ ಗ್ರಾಮಕ್ಕೆ ವಿನಯ್ ಕುಮಾರ್ ಅವರು ಆಗಮಿಸುತ್ತಿದ್ದಂತೆ ಗ್ರಾಮಸ್ಥರು ಅದ್ಧೂರಿಯಾಗಿ ಬರಮಾಡಿಕೊಂಡರು. ವಿನಯ್ ಕುಮಾರ್ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು, ಗ್ರಾಮಸ್ಥರು ಆತ್ಮೀಯವಾಗಿ ಸ್ವಾಗತ ಕೋರಿದರು.

ಕಹಳೆ ಊದುತ್ತಾ, ಡೋಲು, ತಮಟೆ ಬಾರಿಸುತ್ತಾ ಮೆರವಣಿಗೆ ನಡೆಸಲಾಯಿತು. ಈ ಮೆರವಣಿಗೆಯಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ವಿಶೇಷ.

ಕೆಲವರು ವಿನಯ್ ಕುಮಾರ್ ಅವರ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ಮುಗಿಬಿದ್ದರು. ಜೊತೆಗೆ ಕುರಿ ನೀಡಿದರು. ಈ ವೇಳೆ ವಿನಯ್ ಕುಮಾರ್ ಅವರು ಕುರಿಯನ್ನು ಹೆಗಲ ಮೇಲಿಟ್ಟುಕೊಂಡಿದ್ದು ಗಮನ ಸೆಳೆಯಿತು. ಜೈಕಾರಗಳು ಮುಗಿಲು ಮುಟ್ಟಿದವು.

ಈ ವೇಳೆ ಮಾತನಾಡಿದ ವಿನಯ್ ಕುಮಾರ್ ಅವರು ಜಗಳೂರು ಬರಪೀಡಿತ ತಾಲ್ಲೂಕು ಎಂಬ ಹಣೆಪಟ್ಟಿ ಹೊತ್ತಿದೆ. ಈ ತಾಲ್ಲೂಕನ್ನು ಹಸಿರು ನಾಡಾಗಿಸಲು, ನೀರಾವರಿ ಯೋಜನೆಗಳು ಇದುವರೆಗೆ ಕಾರ್ಯಗತ ಗೊಂಡಿಲ್ಲ. ಇಷ್ಟು ವರ್ಷ ಅಧಿಕಾರ ನಡೆಸಿದವರು ಜನರಿಗೆ ಭರವಸೆ ನೀಡಿ ವಂಚಿಸುತ್ತಲೇ ಬಂದಿದ್ದಾರೆ. ಕೆರೆಗಳಿಗೆ ನೀರುಣಿಸುವ ಯೋಜನೆಯು ಸಮರ್ಪಕವಾಗಿ ನಡೆದಿಲ್ಲ, ಈ ಕಾಮಗಾರಿಯು ಮಂದಗತಿಯಲ್ಲಿ ಸಾಗಿದೆ ಎಂಬ ಆರೋಪವೂ ಕೇಳಿ ಬಂದಿದೆ. ಇದು ನನ್ನ ಗಮನಕ್ಕೆ ಬಂದಿದೆ. ಜಗಳೂರು ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಎಲ್ಲಾ ರೀತಿಯಲ್ಲಿಯೂ ಶ್ರಮಿಸುತ್ತೇನೆ. ಒಂದು ಅವಕಾಶ ನೀಡಿ ಎಂದು ಮನವಿ ಮಾಡಿದರು.

ಜಗಳೂರು ತಾಲ್ಲೂಕಿನಲ್ಲಿ ಹೆಚ್ಚಾಗಿ ಹಿಂದುಳಿದವರೇ ಇದ್ದಾರೆ. ಮಕ್ಕಳಿಗೆ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ದೊರೆತಿಲ್ಲ, ಹೈಟೆಕ್ ಶಾಲೆಗಳಿಲ್ಲ, ಎಲ್ಲಾ ಸೌಲಭ್ಯಗಳು ಇರುವಂಥ ಕಾಲೇಜುಗಳಿಲ್ಲ, ಹಾಗಾಗಿ, ಜಗಳೂರು ತಾಲ್ಲೂಕಿನ ವಿವಿಧ ಗ್ರಾಮ ಗಳಿಂದ ವಿದ್ಯಾರ್ಥಿಗಳು ದಾವಣಗೆರೆಗೆ ಹೋಗುವಂಥ ಸ್ಥಿತಿ ನಿರ್ಮಾಣವಾಗಿದೆ. ಜಗಳೂರು ತಾಲ್ಲೂಕಿನ ಎಷ್ಟೋ ಹಳ್ಳಿಗಳಿಗೆ ಇದುವರೆಗೂ ಸರ್ಕಾರಿ ಬಸ್ ಸೌಲಭ್ಯ ಇಲ್ಲ. ಇದರಿಂದ ವಿದ್ಯಾರ್ಥಿನಿಯರು ಓದು ನಿಲ್ಲಿಸಿರುವ ವಿಚಾರವೂ ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ಮೆಕ್ಕೆಜೋಳ ಕೋಲ್ಡ್ ಸ್ಟೋರೇಜ್ ಸಹ ಇಲ್ಲಿ ಅತ್ಯವಶ್ಯಕವಾಗಿ ಬೇಕು. ರೈತಾಪಿ ವರ್ಗವೂ ತುಂಬಾನೇ ಕಷ್ಟದಲ್ಲಿದೆ. ಈ ವರ್ಷ ಬರಗಾಲ ತಲೆದೋರಿರುವುದರಿಂದ ರೈತರ ಸಮಸ್ಯೆ ಅರ್ಥವಾಗುತ್ತದೆ. ಇಷ್ಟೊಂದು ವರ್ಷಗಳ ಕಾಲ ಅಧಿಕಾರದಲ್ಲಿದ್ದವರು ಯಾಕೆ ಈ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸಿಲ್ಲ ಎಂಬುದು ಸಾಮಾನ್ಯವಾಗಿ ಕಾಡುವ ಪ್ರಶ್ನೆ. ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದಾಗಿ ಆಗಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ ಎಂದು ವಿನಯ್ ಕುಮಾರ್ ತಿಳಿಸಿದರು.

ಈ ವೇಳೆ ಸೊಕ್ಕೆ ಗ್ರಾಮದ ಮುಖಂಡರಾದ ಲೋಕರಾಜ್ ನಾಯ್ಕ್, ಹನುಮಂತ, ಹಾಲಪ್ಪ, ಶಿವಣ್ಣ, ಮರೇಗೌಡ್ರು, ಅಂಜಿನಪ್ಪ, ಎಳಿವು ಕೊಟ್ರೇಶ್ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

# ರಾಜರಿಗೆ ಅವಮಾನ, ನಿಜಾಮರಿಗೆ ಮೌನ : ರಾಹುಲ್‌ಗೆ ಮೋದಿ ತರಾಟೆ

ಬೆಂಗಳೂರು, ಏ. 28 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾರತದ ರಾಜ – ಮಹಾರಾಜರನ್ನು ಅವಮಾನಿಸುತ್ತಿದ್ದಾರೆ. ಆದರೆ, ನವಾಬರು, ನಿಜಾಮರು, ಸುಲ್ತಾನರು ಹಾಗೂ ಬಾದ್‌ಷಾಗಳು ಮಾಡಿರುವ ದೌರ್ಜನ್ಯಗಳ ಬಗ್ಗೆ ಮೌನವಾಗಿದ್ದಾರೆ. ಇದೆಲ್ಲ ಓಲೈಕೆ ರಾಜಕಾರಣ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಕರ್ನಾಟಕದ ಬೆಳಗಾವಿ, ಸಿರಸಿ, ದಾವಣಗೆರೆ ಹಾಗೂ ಹೊಸಪೇಟೆಗಳಲ್ಲಿ ಒಂದರ ಹಿಂದೊಂದರಂತೆ ಸಮಾವೇಶಗಳನ್ನು ನಡೆಸಿದ ವೇಳೆ ಮಾತನಾಡಿದ ಅವರು, ಪಿತ್ರಾರ್ಜಿತ ಆಸ್ತಿ ಮೇಲೆ ತೆರಿಗೆ ಹೇರಲು ಕಾಂಗ್ರೆಸ್ ಬಯಸಿದೆ ಎಂದೂ ತರಾಟೆಗೆ ತೆಗೆದುಕೊಂಡರು.

ಜನರ ಆಸ್ತಿ ಹೆಚ್ಚಿಸಲು ಬಿಜೆಪಿ ಕೆಲಸ ಮಾಡುತ್ತಿದೆ. ಆದರೆ, ಶೆಹಜಾದಾ (ರಾಹುಲ್ ಗಾಂಧಿ) ಹಾಗೂ ಅವರ ಸಹೋದರಿ (ಪ್ರಿಯಾಂಕ ಗಾಂಧಿ ವಾದ್ರಾ) ಅವರು ಅಧಿಕಾರಕ್ಕೆ ಬಂದರೆ ಆಸ್ತಿಗಳ ಪರಿಶೀಲನೆ ಮಾಡಲಾಗುವುದು. ಜನರ ಆಸ್ತಿ ವಶಪಡಿಸಿಕೊಂಡು ಮರು ಹಂಚಿಕೆ ಮಾಡಲಾಗುವುದು ಎಂದು ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷವು ನಮ್ಮ ಇತಿಹಾಸ ಹಾಗೂ ಸ್ವಾತಂತ್ರ್ಯ ಹೋರಾಟವನ್ನು ಓಲೈಕೆ ಹಾಗೂ ಮತ ಬ್ಯಾಂಕ್ ದೃಷ್ಟಿಯಿಂದ ಬರೆಯುವಂತೆ ನೋಡಿಕೊಂಡಿದೆ. ಇಂದು ಕಾಂಗ್ರೆಸ್‌ನ ಶೆಹಜಾದಾ ಇದೇ ತಪ್ಪನ್ನು ಮುಂದುವರೆಸುತ್ತಿದ್ದಾರೆ. ಭಾರತದ ರಾಜ ಮಹಾರಾಜರು ದುರಾಚಾರಿಗಳು ಎಂದು ಅವರು ಹೇಳಿಕೆ ನೀಡಿದ್ದಾರೆ.

ಬಡವರ ಆಸ್ತಿ ಹಾಗೂ ಜಮೀನನ್ನು ಅವರು ವಶಪಡಿಸಿಕೊಳ್ಳುತ್ತಿದ್ದರು ಎಂದು ಆರೋಪಿಸಿದ್ದಾರೆ. ಛತ್ರಪತಿ ಶಿವಾಜಿ ಮಹಾರಾಜ್ ಹಾಗೂ ಕಿತ್ತೂರು ರಾಣಿ ಚನ್ನಮ್ಮ ಅಂಥವರನ್ನು ರಾಹುಲ್ ಗಾಂಧಿ ಅವಮಾನಿಸಿದ್ದಾರೆ. ಶಿವಾಜಿ ಹಾಗೂ ಚೆನ್ನಮ್ಮ ಅವರ ಆಡಳಿತ ಮತ್ತು ದೇಶಪ್ರೇಮ ಇಂದಿಗೂ ನಮಗೆ ಸ್ಫೂರ್ತಿ ಎಂದು ಮೋದಿ ಹೇಳಿದರು.

ಮೈಸೂರು ರಾಜ ಕುಟುಂಬವನ್ನು ದೇಶದ ಜನರು ಇಂದಿಗೂ ಗೌರವಿಸುತ್ತಾರೆ. ಕಾಂಗ್ರೆಸ್‌ನ ಶೆಹಜಾದಾ ಹೇಳಿಕೆ ಉದ್ದೇಶಪೂರ್ವಕ, ಮತ ಬ್ಯಾಂಕ್ ರಾಜಕೀಯ ಹಾಗೂ ಓಲೈಕೆಯದ್ದಾಗಿದೆ. ಅವರು ರಾಜ – ಮಹಾರಾಜರ ಬಗ್ಗೆ ಮಾತ್ರ ಮಾತನಾಡುತ್ತಾರೆ. ನವಾಬರು, ನಿಜಾಮರು, ಸುಲ್ತಾನರು ಹಾಗೂ ಬಾದ್‌ಷಾಗಳು ಭಾರತದ ಇತಿಹಾಸದಲ್ಲಿ ಮಾಡಿರುವ ಅತ್ಯಾಚಾರಗಳ ಬಗ್ಗೆ ಅವರ ಬಾಯಿ ಬಂದ್ ಆಗಿರುತ್ತದೆ. ರಾಜ – ಮಹಾರಾಜರ ಬಗ್ಗೆ ಕೆಟ್ಟದಾಗಿ ಮಾತನಾಡಿ ಅವಮಾನಿಸುತ್ತಾರೆ ಎಂದು ಆರೋಪಿಸಿದರು.

ಮೊಘಲ್ ದೊರೆ ಔರಂಗಜೇಬ್ ಹಲವಾರು ದೇವಾಲಯಗಳನ್ನು ಅಪವಿತ್ರಗೊಳಿಸಿದ್ದ ಹಾಗೂ ನಾಶಗೊಳಿಸಿದ್ದ. ಔರಂಗಜೇಬ್ ಪ್ರಶಂಸಿಸುವ ಪಕ್ಷಗಳ ಜೊತೆ ಕಾಂಗ್ರೆಸ್ ಸಂತೋಷದಿಂದ ಮೈತ್ರಿ ಮಾಡಿಕೊಳ್ಳುತ್ತದೆ. ದೇಶದ ವಿಭಜನೆಯಲ್ಲಿ ಪಾತ್ರ ವಹಿಸಿದ ನವಾಬರು ಅವರಿಗೆ ನೆನಪಾಗುವುದಿಲ್ಲ ಎಂದರು.

## ರಾಜರ ಕುರಿತ ರಾಹುಲ್ ಹೇಳಿಕೆ ತಿರುಚಲಾಗಿದೆ : ಕಾಂಗ್ರೆಸ್

ನವದೆಹಲಿ, ಏ. 28 – ರಾಜ ಮಹಾರಾಜರ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಹೇಳಿಕೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿರುಚಿ, ಅದಕ್ಕೆ ಕೋಮು ಬಣ್ಣ ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಅವರು ರಾಹುಲ್ ಗಾಂಧಿ ನೀಡುವ ಪ್ರತಿಯೊಂದು ಹೇಳಿಕೆಯನ್ನು ತಿರುಚುತ್ತಿದ್ದಾರೆ. ಇದು ಕರುಣಾಜನಕ ಸ್ಥಿತಿಯ ಹಂತ ದಾಟಿ ಹೋಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

## ಸತ್ಯನಾರಾಯಣಪುರ ಕ್ಯಾಂಪ್‌ನಲ್ಲಿ ಶ್ರೀರಾಮ ದೇವಸ್ಥಾನ ಲೋಕಾರ್ಪಣೆ



ಮಲೇಬೆನ್ನೂರು, ಏ.28- ಸತ್ಯನಾರಾಯಣಪುರ (ಕುಂದುವಾಡ ಕ್ಯಾಂಪ್) ಕ್ಯಾಂಪ್‌ನಲ್ಲಿ ನೂತನವಾಗಿ ಕಲ್ಲಿನಲ್ಲಿ ಸುಂದರವಾಗಿ ನಿರ್ಮಿಸಿರುವ ಶ್ರೀರಾಮ ದೇವಸ್ಥಾನ ಉದ್ಘಾಟನೆ ಮತ್ತು ಶ್ರೀ ಸೀತಾರಾಮ, ಲಕ್ಷ್ಮಣ, ಹನುಮಂತ ಸಮೇತ ಶ್ರೀ ಮಹಾಗಣಪತಿ, ಶ್ರೀ ಮಹಾಲಕ್ಷ್ಮಿ, ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಧ್ವಜ ಸ್ಥಂಭ, ಜೀವ ಧ್ವಜ, ಶಿಖರ, ಜಯ-ವಿಜಯ ಯಂತ್ರ ಪ್ರತಿಷ್ಠಾಪನೆ ಯೊಂದಿಗೆ ಕಳಸಾರೋಹಣ ಕಾರ್ಯಕ್ರಮಗಳು ಶುಕ್ರವಾರ ಶ್ರದ್ಧಾ-ಭಕ್ತಿಯಿಂದ ಜರುಗಿದವು.

## ಶ್ರೀರಾಮನ ದರ್ಶನ ಪಡೆದ ಸಚಿವ ಎಸ್ಸೆಸ್ಸೆಂ



ದಾವಣಗೆರೆ, ಏ.28- ತಾಲ್ಲೂಕಿನ ಸತ್ಯನಾರಾಯಣಪುರ ಕ್ಯಾಂಪ್ (ಕುಂದುವಾಡ ಕ್ಯಾಂಪ್) ನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ರಾಮ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ಭಾಗಿಯಾಗಿ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸತ್ಯನಾರಾಯಣ ಪುರ (ಕುಂದುವಾಡ ಕ್ಯಾಂಪ್) ದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ರಾಮ ದೇವಸ್ಥಾನ ಮತ್ತು ಶ್ರೀ ಸೀತಾರಾಮ್, ಲಕ್ಷ್ಮಣ, ಹನುಮಂತ, ಶ್ರೀ ಮಹಾಗಣಪತಿ, ಮಹಾಲಕ್ಷ್ಮಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಂಡು ಭಕ್ತಿ ಸಮರ್ಪಣೆ ಮಾಡಿದರು.

## ಕಿತ್ತೂರು : ಬಿಜೆಪಿ ಮುಖಂಡರು ಕಾಂಗ್ರೆಸ್‌ಗೆ

ದಾವಣಗೆರೆ, ಏ. 28 - ತಾಲ್ಲೂಕಿನ ಕಿತ್ತೂರು ಗ್ರಾಮದ ಹಲವು ಬಿಜೆಪಿ ಮುಖಂಡರು ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕೃಷ್ಣಪ್ಪ, ಕುಮಾರಗೌಡ, ತಿಪ್ಪೇಸ್ವಾಮಿ, ಪ್ರಕಾಶ್, ಚಂದ್ರಪ್ಪ, ಅಂಜಿನಪ್ಪ, ವೀರಪ್ಪ, ಪ್ರಕಾಶಪ್ಪ, ಕೃಷ್ಣಪ್ಪ, ಕುಮಾರ್ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.



## ಪ್ರಥಮ ಪದವಿಗೆ ಪ್ರವೇಶಕ್ಕೆ ಆಹ್ವಾನ

ದಾವಣಗೆರೆ, ಏ. 28 - ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 2024-25 ನೇ ಸಾಲಿಗೆ ಪ್ರಥಮ ವರ್ಷದ ಬಿಎ, ಬಿಕಾಂ, ಬಿಬಿಎ, ಬಿಎಸ್ಸಿ ಪದವಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದ್ವಿತೀಯ ಪಿಯುಸಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಕಾಲೇಜಿಗೆ ಭೇಟಿ ನೀಡಿ ಅರ್ಜಿಗಳನ್ನು ಪಡೆದುಕೊಳ್ಳಬಹುದು ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರೊ ದಾದಾಪೀರ್ ನವಿಲೇಹಾಳ ತಿಳಿಸಿರುತ್ತಾರೆ.


## ಅಭಿ ಕಾಟನ್‌ನ ಅಭಿಷೇಕ್ ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಏ. 28 - ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಅಶೋಕ್ ಗೋಪನಾಳ್, ಅಭಿ ಕಾಟನ್‌ನ ಅಭಿಷೇಕ್ ಅವರು ತಮ್ಮ ಬೆಂಬಲಿಗರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಬಿಜೆಪಿ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಅಶೋಕ್ ಗೋಪನಾಳ್, ಅಭಿ ಕಾಟನ್‌ನ ಅಭಿಷೇಕ್ ಅವರೊಂದಿಗೆ ವರದಿಗಾರ ಮಾಯಕೊಂಡದ ಜಗದೀಶ್, ಚಿಕ್ಕಮೇಗಳಗೆರೆ ಚನ್ನಬಸಪ್ಪ, ಹಿರೇಮೇಗಳಗೆರೆ ಶಂಕರಣ್ಣ, ಕಂಚಿಕೆರೆ ಸಿದ್ದಣ್ಣ, ಸ್ವಾಮಿಲಿಂಗಪ್ಪ, ಬಸವಂತಣ್ಣ, ಕೊಳೇನಹಳ್ಳಿ ನಾಗರಾಜ್, ಮಲ್ಲಿಕಾರ್ಜುನ್ ಹಿರೇಮೇಗಳಗೆರೆ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಉದಯಕುಮಾರ್, ಗಣೇಶ್ ಹುಲ್ಮನಿ ಮತ್ತಿತರರು ಉಪಸ್ಥಿತರಿದ್ದರು.

## ನಿಟುವಳ್ಳಿಯ ಶ್ರೀ ಕರಿಯಾಂಬಿಕಾ ದೇವಿ ಜಾತ್ರಾ ಮಹೋತ್ಸವದಲ್ಲಿ ಇಂದು



ದಾವಣಗೆರೆ - ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನಿಂದ ಇಂದಿನಿಂದ ಬರುವ ಮೇ 3 ರವರೆಗೆ ಶ್ರೀ ಕರಿಯಾಂಬಿಕಾ ದೇವಿಯ ಜಾತ್ರಾ ಮಹೋತ್ಸವ ನಡೆಯಲಿದೆ. ಇಂದು ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಗುರು ಗಣಪತಿ ಪ್ರಾರ್ಥನೆ, ಸಂಕಲ್ಪ ದೇವಿಗೆ ಶ್ರೀ ಸೂಕ್ತದಿಂದ ಅಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ, ಮಹಾಪೂಜೆ ನಡೆಯಲಿದ್ದು, ನಾಳೆ ದಿನಾಂಕ ಮಂಗಳವಾರ ಶ್ರೀ ಅಮ್ಮನವರ ವಿಶೇಷ ಅಲಂಕಾರ, ಉಡಿ ತುಂಬುವ ಕಾರ್ಯಕ್ರಮ ಮತ್ತು ಮಹಾಪೂಜೆ ಇದೆ.

## ಬಿಜೆಪಿ - ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಏ. 28 - ಬಿಜೆಪಿಯ ಮುಖಂಡ ಹಾಗೂ ಮಲೇಬೆನ್ನೂರು ಹಿಂದೂ ಮಹಾಗಣಪತಿ ಸಮಿತಿಯ ಅಧ್ಯಕ್ಷ ಚಂದ್ರಶೇಖರ್, ಪದಾಧಿಕಾರಿಗಳಾದ ಆರ್. ಪುನೀತ್ ಕುಮಾರ್, ಆರ್. ಹರೀಶ್ ಕುಮಾರ್, ರಂಗನಾಥ್ ಹಾಗೂ ಜೆಡಿಎಸ್ ಪಕ್ಷದ ಮುಖಂಡರಾದ ಸಿ.ಬಿ. ಅಬ್ದುಲ್ ಹಮೀದ್ ಸಾಬ್, ಅಬ್ದುಲ್ ರಹೀಂ ಸಾಬ್, ಅಬ್ದುಲ್ ಹಾದಿ ಸಾಬ್, ಅಬ್ದುಲ್ ಅಜೀಜ್, ಅಬ್ದುಲ್ ಖಾದರ್ ಸೇರಿದಂತೆ ಇತರರು ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಹೆಚ್ ಎಸ್.ನಾಗರಾಜ್, ಬಿ.ಎಂ.ವಾಗೀಶ್ ಸ್ವಾಮಿ, ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ.ನಾಗೇಂದ್ರಪ್ಪ, ಎಂ.ಬಿ.ಹಬೀದ್, ಎಬಿಎಂ ವಿಜಯಕುಮಾರ್ ಹಾಗೂ ಇತರರು ಇದ್ದರು.

## ಕಲಾ ತಂಡಕ್ಕೆ ಆಹ್ವಾನ

ದಾವಣಗೆರೆ, ಏ.28- ಬಾಡಾ ಕ್ರಾಸ್‌ನಲ್ಲಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಮೇ 12ರಂದು ಪಂ.ಪುಟ್ಟರಾಜ ಗುರು ಅಭಿಮಾನಿಗಳು ಹಾಗೂ ಭಕ್ತರ ರಾಜ್ಯ ಮಟ್ಟದ ಸಮಾವೇಶ ನಡೆಯಲಿದೆ. ಅಂದು ಸಮಾವೇಶದಲ್ಲಿ ಸಮೂಹ ಭಕ್ತಿ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ನಡೆಯಲಿದ್ದು, ಸಮಾವೇಶದಲ್ಲಿ ಭಾಗವಹಿಸಲು ಆಸಕ್ತರು 99648 29122ಕ್ಕೆ ವ್ಯಾಟ್ಸಾಪ್ ಮಾಡಬಹುದು. ಹೆಸರು ನೋಂದಾಯಿಸಲು ಮೇ 5 ಕೊನೆ ದಿನವಾಗಿದ್ದು, ಹೆಚ್ಚಿನ ವಿವರಕ್ಕೆ 9886717732 ಸಂಪರ್ಕಿಸಬಹುದು.

## ಮಾಜಿ ಸಚಿವ ಎಸ್‌ಎಆರ್‌ಗೆ ಪ್ರಧಾನಿ ಮೋದಿ ಗೌರವ



ದಾವಣಗೆರೆ, ಏ.28- ಸರ್ಕಾರಿ ಬಾಲಕರ ಪ್ರೌಢಶಾಲಾ ಮೈದಾನದಲ್ಲಿ ಬಿಜೆಪಿಯಿಂದ ಏರ್ಪಾಡಾಗಿದ್ದ ವಿಜಯ ಸಂಕಲ್ಪ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಸಚಿವರೂ, ಹಿರಿಯರೂ ಆದ ಎಸ್.ಎ. ರವೀಂದ್ರನಾಥ್ ಅವರನ್ನು ಗೌರವಿಸಿದರು.

## ಮಹದೇವ್ ಆಪ್ ಪ್ರಕರಣ : ನಟ ಸಾಹಿಲ್ ಖಾನ್ ಬಂಧನ

ಮುಂಬೈ, ಏ. 28 – ಮಹದೇವ್ ಬೆಟ್ಟಿಂಗ್ ಆಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಸಾಹಿಲ್ ಖಾನ್ ಅವರನ್ನು ಮುಂಬೈ ನ್ಯಾಯಾಲಯ ಮೇ 1ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಿದೆ.

ಖಾನ್‌ರನ್ನು ಛತ್ತೀಸ್‌ಘಡದ ಜಗದಾಳ್ಪುರದಲ್ಲಿ ಶನಿವಾರ ವಶಕ್ಕೆ ತೆಗೆದುಕೊಳ್ಳಲಾಗಿತ್ತು. ಬಂಧನ ಪೂರ್ವ ಜಾಮೀನು ಅರ್ಜಿಯನ್ನು ಬಾಂಬೆ ಹೈಕೋರ್ಟ್ ತಿರಸ್ಕರಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ 2 ಸಾವಿರಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 1,700ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳ ವಿವರಗಳ ಪರಿಶೀಲನೆ ನಡೆಸಬೇಕಿದೆ. ಇದಕ್ಕಾಗಿ ನಟನನ್ನು ವಶಕ್ಕೆ ನೀಡುವಂತೆ ಪೊಲೀಸರು ಕೋರಿದ್ದರು.

'ಸ್ಟೈಲ್' ಹಾಗೂ 'ಎಕ್ಸ್‌ಕ್ಯೂಸ್ ಮಿ' ಮುಂತಾದ ಚಿತ್ರಗಳಲ್ಲಿ ನಟಿಸಿದ್ದ ಸಾಹಿಲ್ ಖಾನ್, ಇತ್ತೀಚಿನ ದಿನಗಳಲ್ಲಿ ಫಿಟ್‌ನೆಸ್ ಪರಿಣಿತರಾಗಿದ್ದರು. ಮಹದೇವ್ ಆಪ್ ಬೆಟ್ಟಿಂಗ್ ಹಗರಣ 15 ಸಾವಿರ ಕೋಟಿ ರೂ.ಗಳದ್ದು ಎಂದು ಆರೋಪಿಸಲಾಗಿದೆ.


**ಬೇಕಾಗಿದ್ದಾರೆ**

ಫಾರ್ಮಾಸ್ಯೂಟಿಕಲ್ ಡಿಸ್ಟ್ರಿಬ್ಯೂಟರ್‌ನಲ್ಲಿ
ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ.
SSLC / PUC Pass, ಪದವೀಧರರು
ಬೇಕಾಗಿದ್ದಾರೆ. ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
ವಯೋಮಿತಿ : 18 ರಿಂದ 30 ವರ್ಷ
ಮೊ : 96069 04471



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 28.4.2024ರಂದು ನಿಧನರಾದ ಮೆ|| ಉಮಾ ಟ್ರೇಡರ್ಸ್ ಮಾಲೀಕರಾದ
**ಶ್ರೀ ಎಂ.ಜಿ. ರಾಜಣ್ಣ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


**ದೇವರಮನಿ ಶಿವಕುಮಾರ್**
ಜಿಲ್ಲಾಧ್ಯಕ್ಷರು, ಶ್ರೀಮದ್ ವೀರಶೈವ ಸದ್ಬೋಧನಾ ಸಂಸ್ಥೆ
ದಾವಣಗೆರೆ ಜಿಲ್ಲಾ ಘಟಕ

**ದೇವರಮನಿ ಶಿವರಾಜ್**
ಅಧ್ಯಕ್ಷರು, ಶ್ರೀ ಜಗದ್ಗುರು ರೇಣುಕಾ ಸಾಂಸ್ಕೃತಿಕ ಸಂಘ

**ದೇವರಮನಿ ಮುರುಗೇಶ್**
ಅಧ್ಯಕ್ಷರು, ಕರ್ನಾಟಕ ಯೂತ್ಸ್ ಅಸೋಸಿಯೇಷನ್



**ಭಾವಪೂರ್ಣ ಶ್ರದ್ಧಾಂಜಲಿ**



ಉಮಾ ಟ್ರೇಡರ್ಸ್ ಮಾಲೀಕರು
**ಶ್ರೀ ಎಂ.ಜಿ. ರಾಜಣ್ಣ**

ದಿನಾಂಕ 28.04.204ರಂದು ನಿಧನರಾದ ಸರಳ ವ್ಯಕ್ತಿತ್ವದ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಮಾಡಾಳ್ ಕುಟುಂಬದ ಶ್ರೇಯಸ್ಸಿಗಾಗಿ ಶ್ರಮಿಸುತ್ತಿದ್ದ, ಸಮಾಜ ಜೀವಿಯನ್ನು ಕಳೆದುಕೊಂಡು ಸಮಾಜ ಬಡವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಅಗಲಿಕೆಯ ನೋವನ್ನು ಭರಿಸುವಂತ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಬಸವಾದಿ ಶರಣ ಶರಣೆಯರು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

**ಎಂ. ಕೆ. ಬಕ್ಕಪ್ಪ, 9916242588**



**17ನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಜಯಂತಿದೇವಿ ಎಲ್.ಕೆ.**
ನೀವು ನಮ್ಮನ್ನಗಲಿ ಇಂದಿಗೆ
ಹದಿನೇಳು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ
ಮತ್ತು ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿರುವ,
**ಪತಿ : ಲಿಂಗಂಪಲ್ಲಿ ಕೃಷ್ಣಮೂರ್ತಿ ಮತ್ತು ಕುಟುಂಬ**


# ಸ್ಲಂ ಜನರ ಪ್ರಣಾಳಿಕೆಯನ್ನು ಕಾಂಗ್ರೆಸ್ ಪಕ್ಷ ಒಪ್ಪಿದೆ



**ಎಸ್ಸೆಸ್**

ದಾವಣಗೆರೆ, ಏ. 28 - ಇಲ್ಲಿನ ಭಾಷಾನಗರ ರಿಂಗ್ ರಸ್ತೆಯಲ್ಲಿರುವ ಎಸ್.ಎಸ್. ಶಾದಿಮಹಲ್‌ನಲ್ಲಿ ಸ್ಲಂ ಜನರ ಮತ ಸಂವಿಧಾನ ರಕ್ಷಣೆಗಾಗಿ, ಮತ ಜಾಗೃತಿ ಸಮಾವೇಶವನ್ನು ಸ್ಲಂ ಜನಾಂದೋಲನ ಕರ್ನಾಟಕ ಸಾವಿತ್ರಿಬಾಯಿ ಫುಲೆ ಮಹಿಳಾ ಸಂಘಟನೆಯಿಂದ ಹಮ್ಮಿಕೊಳ್ಳಲಾಗಿತ್ತು.

ಸಮಾವೇಶದಲ್ಲಿ ಸ್ಲಂ ಜನರ 10 ಅಂಶಗಳ ಸಾರ್ವತ್ರಿಕ ಒತ್ತಾಯಗಳನ್ನು ಸ್ವೀಕರಿಸಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಸ್ಲಂ ಸಂಘಟನೆ ಸಂವಿಧಾನ ರಕ್ಷಣೆಗಾಗಿ ರಾಜ್ಯಾದ್ಯಂತ ಸ್ಲಂ ಜನರಲ್ಲಿ ಜಾಗೃತಿ ಮಾಡುತ್ತಿರುವುದು ಈ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸರಿಯಾಗಿದೆ. ಸ್ಲಂ ಜನರ ಪ್ರಮುಖ ಜಲ್ವಂತ ಸಮಸ್ಯೆಗಳನ್ನು ನಮ್ಮ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ತಮ್ಮ ನ್ಯಾಯ ಪತ್ರದಲ್ಲಿ ಬಹುತೇಕ ಒಪ್ಪಿಕೊಂಡು ಸೇರಿಸಿರುತ್ತಾರೆ ಎಂದರು.

ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬಡ ಜನರ ಪರವಾಗಿ ಕಳೆದ 10 ವರ್ಷಗಳಿಂದ ಕೆಲಸ ಮಾಡಿಲ್ಲ. ಈ ಬಾರಿ ಮೋದಿ ಸೋಲಿಸಿ, ದಾವಣಗೆರೆಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲ್ಲಿಸಿ, ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಿಕೊಡುತ್ತಾರೆ. ಅರ್ಹ ಹಾಗೂ ನೈಜ ನಿವೇಶನ ರಹಿತರಿಗೆ ನಿವೇಶನ ನೀಡುವುದು ನನ್ನ ಕೆಲಸವಾಗಿದೆ. ನಾನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸಂಘಟನೆಯ ರಾಜ್ಯ ಸಂಚಾಲಕ ಎ. ನರಸಿಂಹ ಮೂರ್ತಿ ಮಾತನಾಡಿ, ಸಂವಿಧಾನ ಉಳಿದರೆ ಮಾತ್ರ ಜನ ಸಾಮಾನ್ಯರ ಹಕ್ಕುಗಳು ರಕ್ಷಣೆಯಾಗುತ್ತವೆ. ದೇಶದ ಎಲ್ಲಾ ನಾಗರಿಕರಿಗೆ ಸಮಾನತೆಯ ಸ್ವಾತಂತ್ರ್ಯ ನೀಡಿರುವ ಸಂವಿಧಾನವನ್ನು ಬಿಜೆಪಿ ಪಕ್ಷ ಒಪ್ಪುತ್ತಿಲ್ಲ. ಈ ಬಾರಿ 400 ಸೀಟು ಗೆದ್ದರೆ ಸಂವಿಧಾನ ಬದಲಾಯಿಸುವುದಾಗಿ ಹೇಳುತ್ತಿದ್ದಾರೆ. ಹಾಗಾಗಿ ನಾವೆಲ್ಲರೂ ಈ ಬಾರಿ ಸಂವಿಧಾನ ರಕ್ಷಣೆ ಮಾಡಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕಾಗಿದೆ ಎಂದರು.

ಬೆಲೆ ಏರಿಕೆ, ಜಿಎಸ್‌ಟಿ ಮೂಲಕವಾಗಿ ಆರ್ಥಿಕತೆಯಾಧಾರನೇ ಕಾರಣ. ಈ ದೇಶದ ಬಡವರ ಸ್ಥಿತಿ ದಿನೇ ದಿನೇ ದುಸ್ಥಿತಿಗೆ ತಲುಪುತ್ತಿದೆ. ನಮ್ಮ 10 ಪ್ರಮುಖ ಬೇಡಿಕೆಗಳ ಪೈಕಿ ಭಾರತ್ ಜೋಡೋ ಯಾತ್ರೆಯಲ್ಲಿ 5 ಅಂಶಗಳನ್ನು ಸ್ವೀಕರಿಸಿದೆ. ಹಾಗಾಗಿ ಕಾಂಗ್ರೆಸ್ ನ್ಯಾಯಪತ್ರ ಸಂವಿಧಾನ ಜನರಿಗೆ ನೀಡಿರುವ ಖಾತ್ರಿಯನ್ನು ಮತ್ತು ದೇಶದ ಸಂಪತ್ತನ್ನು ಜನರಿಗೆ ಹಂಚಿಕೆ ಮಾಡುವ ಗುರಿ ಹೊಂದಿದೆ ಎಂದರು.

ವೇದಿಕೆಯಲ್ಲಿ ಗೌರವಾಧ್ಯಕ್ಷ ಎಸ್.ಎಲ್. ಆನಂದಪ್ಪ, ಜಿಲ್ಲಾ ಸಂಚಾಲಕ ರೇಣುಕಾ ಯಲ್ಲಮ್ಮ, ಅಧ್ಯಕ್ಷ ಎಂ. ಶಬ್ಬೀರ್ ಸಾಬ್, ಮಂಜುಳ, ಜಂಷಿದಾ ಬಾನು, ಬಾಲಪ್ಪ, ಬೀಬಿಜಾನ್, ಗೀತಮ್ಮ, ಚಮನ್ ಮುಂತಾದವರಿದ್ದರು.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಸೋಮವಾರ, ಏಪ್ರಿಲ್ 29, 2024

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

☎ 08192 254736 91642 99999

## ಶಿಕ್ಷಣದ ಸುಧಾರಣೆಗೆ ನನ್ನ ಮೊದಲ ಆದ್ಯತೆ



ಹೊನ್ನಾಳಿ, ಏ.28- ಜಿಲ್ಲೆಯ ಪ್ರತಿಯೊಂದು ಹಳ್ಳಿಗಳಲ್ಲಿಯೂ ಬಿಜೆಪಿ - ಕಾಂಗ್ರೆಸ್ ಅಭ್ಯರ್ಥಿಗಳು ಬೇಡ. ಇಬ್ಬರ ಜಗಳದಲ್ಲಿ ಪಕ್ಷೇತರ ಅಭ್ಯರ್ಥಿ ಗೆಲ್ಲಿಸಲು ಶ್ರಮಿಸೋಣ ಎಂಬ ಸಂಕಲ್ಪವನ್ನು ಜನರು ಮಾಡಿದ್ದಾರೆ. ನಾನು ಹೋದ ಕಡೆಗಳಲ್ಲಿ ಅದ್ಭುತ ಸ್ಪಂದನೆ ಸಿಗುತ್ತಿದೆ. ಪ್ರತಿಯೊಬ್ಬ ಸ್ವಾಭಿಮಾನಿಯೂ ಬದಲಾವಣೆ ಬಯಸುತ್ತಿದ್ದಾರೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ತಿಳಿಸಿದರು.

**ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್**

ಹೊನ್ನಾಳಿ ತಾಲ್ಲೂಕಿನ ಮುಕ್ತೇನಹಳ್ಳಿ ಸೇರಿದಂತೆ, ವಿವಿಧ ಗ್ರಾಮಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ನಾನು ನಿಸ್ವಾರ್ಥಿ. ಜನರ ಸೇವೆ ಮಾಡಲು ಬಂದಿರುವವನು. ಚುನಾವಣೆಯಲ್ಲಿ ಗೆಲ್ಲಲಿ, ಸೋಲಲಿ. ಇದೇ ರೀತಿ ನಿಮ್ಮ ಜೊತೆ ಇರುತ್ತೇನೆ. ಸಂಪರ್ಕದಲ್ಲಿರುತ್ತೇನೆ. ನನ್ನ ಕೈಯಲ್ಲಿ ಅಧಿಕಾರ ಕೊಟ್ಟರೆ ದಾವಣಗೆರೆ ಜಿಲ್ಲೆಯ ಅಭಿವೃದ್ಧಿ ಮಾಡಿ ತೋರಿಸುತ್ತೇನೆ ಎಂದು ಹೇಳಿದರು.

ಗ್ರಾಮೀಣ ಭಾಗದ ಶಾಲೆಗಳನ್ನು ನೋಡಿದರೆ ಬೇಸರವಾಗುತ್ತದೆ. ಮೂಲಭೂತ ಸೌಲಭ್ಯಗಳಿಲ್ಲ, ಗುಣಮಟ್ಟದ ಶಿಕ್ಷಣಕ್ಕೆ ನೆರವಿಲ್ಲ. ಇಲ್ಲಿನ ಶಾಲೆಯ ಮೇಲ್ಛಾವಣಿಯ ಹೆಂಚುಗಳು ಒಡೆದು ಹೋಗಿವೆ. ನನ್ನ ಮೊದಲ ಆದ್ಯತೆ ಶಿಕ್ಷಣ ಸುಧಾರಣೆಗೆ. ಶಿಕ್ಷಣದ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಕಾಲ ಮೇಲೆ ನಿಂತುಕೊಳ್ಳಬೇಕು. ಸಮಾಜದಲ್ಲಿ ಘನತೆ, ಗೌರವದಿಂದ ಬದುಕಲು ಜೀವನ ಕಟ್ಟಿಕೊಳ್ಳಬೇಕು ಎಂಬುದು ನನ್ನ ಕನಸು. 650 ಕಿಲೋಮೀಟರ್ ಪಾದಯಾತ್ರೆ ಮಾಡಿದಾಗ ಹಳ್ಳಿಗಳೆಂದರೆ ಯಾಕೆ ನಿರ್ಲಕ್ಷ್ಯಿಸಲಾಗುತ್ತಿದೆ ಎಂಬ ಪ್ರಶ್ನೆ ಕಾಡಿತ್ತು. ಬಸ್ ವ್ಯವಸ್ಥೆ ಇಲ್ಲ. ಇದನ್ನು ಮಾಡದಿರುವುದಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯೇ ಕಾರಣ ಎಂದು ಆರೋಪಿಸಿದರು.

ಕಳೆದ 30 ವರ್ಷಗಳಿಂದಲೂ ಜನಪರ ಕಾಳಜಿ (5ನೇ ಪುಟಕ್ಕೆ)

# ದೇಶ ಒಡೆ, ಅಭಿವೃದ್ಧಿಗೆ ತಡೆ: ಮೋದಿ ಕಿಡಿ

## ದಾವಣಗೆರೆಯಲ್ಲಿ ಗೆಲುವಿನ ಬೆಣ್ಣೆ ದೋಸೆ ಸವಿಯಲು ಸಿದ್ಧರಾಗಿ ಎಂದ 'ನಮೋ'



ದಾವಣಗೆರೆ, ಏ. 28 - ಕರ್ನಾಟಕದಲ್ಲಿ ಮೊದಲ ಸುತ್ತಿನ ಚುನಾವಣೆಯ ನಂತರ, ಕಾಂಗ್ರೆಸ್‌ಗೆ ಖಾತೆ ತೆರೆಯುವ ವಿಶ್ವಾಸವೂ ಇಲ್ಲದಂತಾಗಿದೆ. ಈ ಬಾರಿ ಕರ್ನಾಟಕದಿಂದ ಒಂದು ಸೀಟಾದರೂ ದೊರೆತು, ಖಾತೆಯಾದರೂ ತೆರೆಯಲಿ ಎಂಬುದೇ ಅದರ ಚಿಂತೆಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ಬಿಜೆಪಿಯಿಂದ ಆಯೋಜಿಸಲಾಗಿದ್ದ ವಿಕಸಿತ ಭಾರತಕ್ಕೆ ವಿಜಯ ಸಂಕಲ್ಪ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡಿದರು. ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿ ದಿರುವ ಗಾಯತ್ರಿ ಸಿದ್ದೇಶ್ವರ ಹಾಗೂ ಹಾವೇರಿ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರ ಮತ ಯಾಚಿಸಲು ಸಮಾವೇಶ ಆಯೋಜಿಸಲಾಗಿತ್ತು.

ಕರ್ನಾಟಕದಲ್ಲಿ ಮೊದಲ ಸುತ್ತಿನ ಮತ ದಾನದ ನಂತರ ಕಾಂಗ್ರೆಸ್‌ನಲ್ಲಿ ಕೋಲಾಹಲವೇ ಉಂಟಾಗಿದೆ. ಬರುವ ಮೇ 7ರ ಎರಡನೇ ಸುತ್ತಿನಲ್ಲಾದರೂ ಒಂದು ಸೀಟು ಸಿಗಲಿ ಎಂಬ ಯೋಚನೆ ಕಾಂಗ್ರೆಸ್‌ನಲ್ಲಿದೆ. ದಾವಣಗೆರೆಯಲ್ಲಿ ಸೇರಿರುವ ಈ ಜನ ಸಮೂಹ ನೋಡಿದರೆ, ಕಾಂಗ್ರೆಸ್ ಪಕ್ಷದ ಪಾಪಕ್ಕೆ ಶಿಕ್ಷೆ ದೊರೆಯು ವುದು ಖಚಿತ ಎಂದು ಮೋದಿ ಹೇಳಿದರು.

ರಾಜ್ಯದೆಲ್ಲೆಡೆ ಈ ಬಾರಿ 'ಫಿರ್ ಏಕ್ ಬಾರ್ ಮೋದಿ ಸರ್ಕಾರ್' ಎಂಬ ಮಾತು ಪ್ರತಿಧ್ವನಿಸುತ್ತಿದೆ. ಲೋಕಸಭಾ ಚುನಾವಣೆಯ ಫಲಿತಾಂಶ ಬರುವ ಜೂನ್ 4 ಇಡೀ ಕರ್ನಾಟಕಕ್ಕೆ ಸಂಭ್ರಮವಾಗಲಿದೆ. ದಾವಣಗೆರೆಯ ವಿಶೇಷವಾದ ಬೆಣ್ಣೆದೋಸೆಯೊಂದಿಗೆ ಫಲಿತಾಂಶ ಸವಿಯಲು ಇಂದಿನಿಂದಲೇ ಸಿದ್ಧತೆ ಆರಂಭಿಸಿ. ಬೆಣ್ಣೆ ದೋಸೆಯ ಸ್ವಾದ ಇನ್ನಷ್ಟು ಹೆಚ್ಚಾಗಲಿದೆ ಎಂದೂ ಅವರು ಹೇಳಿದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ದೇಶವನ್ನು ಮುನ್ನಡೆಸುತ್ತಿದೆ. ಆದರೆ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಹಿಂದಕ್ಕೆ ತಳ್ಳುತ್ತಿದೆ. ವಿಕಸಿತ ಭಾರತಕ್ಕಾಗಿ 24 ಗಂಟೆಯೂ ಕೆಲಸ ಮಾಡಬೇಕು ಎಂಬುದು ಮೋದಿ ಮಂತ್ರವಾಗಿದೆ. ಆದರೆ, ಕಾಂಗ್ರೆಸ್ ಪಕ್ಷ ದೇಶವನ್ನು ಒಡೆಯುವ, ಅಭಿವೃದ್ಧಿಯನ್ನು ತಡೆಯುವ ಕೆಲಸ ಮಾಡುತ್ತಿದೆ ಎಂದವರು ಆರೋಪಿಸಿದರು.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರು ಮುಖ್ಯ ಮಂತ್ರಿಯಾಗಿದ್ದಾಗ ಕರ್ನಾಟಕದ ಅಭಿವೃದ್ಧಿಗೆ ಕೆಲಸ ಮಾಡಿದ್ದರು. ಆದರೆ, ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿರುವರು ಪರಸ್ಪರ ಕಾಲೆಳೆಯುವುದರಲ್ಲಿ ತೊಡಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು. ಪರೋಕ್ಷವಾಗಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನವರಿಗೆ ಕರ್ನಾಟಕದ ಏಳಿಗೆಯ ಕೆಲಸಕ್ಕೆ (5ನೇ ಪುಟಕ್ಕೆ)

### ನಾರಿ ಶಕ್ತಿಗಾಗಿ ಮೋದಿ ಶ್ರಮ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೆಣ್ಣು ಮಕ್ಕಳ ಸ್ವಾವಲಂಬಿ ಜೀವನಕ್ಕೆ ಲಖ್‌ಪತಿ ದೀದಿ ಯೋಜನೆ ಜಾರಿಗೆ ತಂದಿದ್ದಾರೆ. ನಾರಿ ಶಕ್ತಿಗಾಗಿ ಮೋದಿ ಶ್ರಮಿಸುತ್ತಿದ್ದಾರೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಾರಿ ಶಕ್ತಿಯನ್ನು ವಿರೋಧಿಸುತ್ತಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸಬೇಕಿದೆ ಎಂದೂ ಅವರು ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜನಸಾಮಾನ್ಯರ ಹಿತಕ್ಕಾಗಿ ಜಲಜೀವನ್ ಮಿಷನ್, ಉಜ್ವಲ ಯೋಜನೆ, ನಿರಂತರ ಜ್ಯೋತಿ, ಸ್ವಚ್ಛ ಭಾರತ, ಡಿಜಿಟಲ್ ಇಂಡಿಯಾ, ಕೃಷಿ ಸಮ್ಮಾನ್, ಮುದ್ರಾ ಮುಂತಾದ ದೂರದೃಷ್ಟಿ ಯೋಜನೆ ಜಾರಿಗೆ ತಂದಿದ್ದಾರೆ. ಆರ್ಥಿಕತೆ ವಿಶ್ವದಲ್ಲೇ ಐದನೇ ಸ್ಥಾನಕ್ಕೆ ಬಂದಿದ್ದು, ಮೂರನೇ ಸ್ಥಾನಕ್ಕೆ ತರಲು ಮೋದಿ ಗುರಿ ಹೊಂದಿದ್ದಾರೆ ಎಂದು ಹೇಳಿದರು.

ವಿಕಸಿತ ಭಾರತಕ್ಕಾಗಿ, ರೈತರ ಏಳಿಕೆಗಾಗಿ, ಹೆಣ್ಣು ಮಕ್ಕಳ ರಕ್ಷಣೆಗಾಗಿ, ಆರ್ಥಿಕತೆಗಾಗಿ ನಿಮ್ಮ ಮತ (5ನೇ ಪುಟಕ್ಕೆ)

### ವರ್ಷಕ್ಕೊಂದು ಪ್ರಧಾನಿ ಸೂತ್ರಕ್ಕೆ ಮತ ಪೋಲು ಮಾಡಬೇಡಿ

**ಪ್ರತಿಪಕ್ಷಗಳ ಐ.ಎನ್.ಡಿ.ಐ. ಒಕ್ಕೂಟವು ವರ್ಷಕ್ಕೊಬ್ಬರನ್ನು ಪ್ರಧಾನ ಮಂತ್ರಿ ಮಾಡುವ ಸೂತ್ರ ಹೊಂದಿದೆ. ಹೀಗಾದರೆ ದೇಶ ಹಾಗೂ ಜನರ ಗತಿ ಏನಾಗಲಿದೆ? ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ. ಯಾರು ಪ್ರಧಾನ ಮಂತ್ರಿಯಾಗಬೇಕು ಎಂಬ ಹೆಸರೂ ಅವರ ಬಳಿ ಇಲ್ಲ. ದೇಶದ ಪ್ರಧಾನ ಮಂತ್ರಿ ಹುದ್ದೆಯನ್ನು ಕಣ್ಣು ಮುಚ್ಚಿ ಕೊಡಲಾಗದು. ಅವರ ಹಿನ್ನೆಲೆ ನೋಡಬೇಕಾಗುತ್ತದೆ ಎಂದವರು ಹೇಳಿದರು. ಹೀಗಾಗಿ ಜನರು ಅಪ್ಪಿ ತಪ್ಪಿಯೂ, ಇಂಥವರನ್ನು ಬೆಂಬಲಿಸಲು ಅಮೂಲ್ಯ ಮತ ಪೋಲು ಮಾಡಬಾರದು ಎಂದು ಮೋದಿ ಕರೆ ನೀಡಿದರು.**

### ಬರ ಪರಿಹಾರ; ಬಿಜೆಪಿಯೇ ಮುಂದೆ : ಬೊಮ್ಮಾಯಿ

**ಕಾಂಗ್ರೆಸ್ ಪಕ್ಷದವರು ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಸುಳ್ಳು ಹೇಳುತ್ತಿದ್ದಾರೆ. ಮತಗಳಿಗಾಗಿ, ಚುನಾವಣೆಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.**

**2004-14ರ ನಡುವೆ ಕರ್ನಾಟಕ ಸರ್ಕಾರವು 19,579 ಕೋಟಿ ರೂ.ಗಳ ಪರಿಹಾರಕ್ಕಾಗಿ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಿತ್ತು. ಆದರೆ, ಈ ಅವಧಿಯಲ್ಲಿ ಕೇವಲ 1,054 ಕೋಟಿ ರೂ. ಬಿಡುಗಡೆ ಮಾಡಿತ್ತು.**

**ಮತ್ತೊಂದೆಡೆ 2014-24ರ ನಡುವೆ ಮೋದಿ ಸರ್ಕಾರದ ಎದುರು 18,747 ಕೋಟಿ ರೂ.ಗಳ ಬೇಡಿಕೆ ಇಡಲಾಗಿತ್ತು. ಮೋದಿ ಸರ್ಕಾರ 10 ಸಾವಿರ ಕೋಟಿ ರೂ. ಕೊಟ್ಟಿದೆ ಎಂದವರು ಹೇಳಿದರು.**

# ಸರ್ವಾಧಿಕಾರಿ ಪ್ರವೃತ್ತಿಯ ಬಿಜೆಪಿ ಸೋಲಿಸಿ

## ಕಾಂಗ್ರೆಸ್ ಪಕ್ಷದ ಎಸ್ಟಿ ಕಾರ್ಯಕರ್ತರ ಬೆಂಬಲ ಸಭೆಯಲ್ಲಿ ಮಾಜಿ ಸಂಸದ ಉಗ್ರಪ್ಪ ಕರೆ



**ನೀವು ನನಗೆ ಹೆಚ್ಚಿನ ಸಹಕಾರ ನೀಡಿ ಗೆಲ್ಲಿಸಿದರೆ ತ್ರಿಬಲ್ ಇಂಜಿನ್ ಸರ್ಕಾರವಾಗಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಬಹುದು.**
**- ಡಾ. ಪ್ರಭಾ ಮಲ್ಲಿಕಾರ್ಜುನ್ ಕಾಂಗ್ರೆಸ್ ಅಭ್ಯರ್ಥಿ**

ದಾವಣಗೆರೆ, ಏ.28- ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಬಿಜೆಪಿಯ ಸರ್ವಾಧಿಕಾರಿ ಪ್ರವೃತ್ತಿ ತೊಲಗಿಸಲು ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಬೇಕೆಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹೇಳಿದರು.

ನಗರದ ಸಾಯಿ ಮಂದಿರ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಎಸ್ಟಿ ಕಾರ್ಯಕರ್ತರ ಬೆಂಬಲ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಉಳಿಸಿಕೊಳ್ಳಲು ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸುವ ಶಕ್ತಿ ನಿಮ್ಮಲ್ಲಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯ ಎಸ್ಟಿ ಸಮುದಾಯ ಕಾಂಗ್ರೆಸ್ ಪಕ್ಷ ಗೆಲ್ಲಿಸುವ ಪಣ ತೊಡಬೇಕು ಎಂದು ಹೇಳಿದರು.

ಸಂವಿಧಾನ ಇರದಿದ್ದರೆ ಮೀಸಲಾತಿ ಇರುತ್ತಿರಲಿಲ್ಲ, ಈ ನಿಟ್ಟಿನಲ್ಲಿ 1991ರಲ್ಲಿ ಕಾಂಗ್ರೆಸ್ ಸರ್ಕಾರವು ಸಂವಿಧಾನದ ಸಹಾಯದಿಂದ 51 ಜಾತಿಗಳನ್ನು ಎಸ್ಟಿಗೆ ಸೇರಿಸಿ ಈ ಸಮುದಾಯದ ಹಿತ ಕಾಪಾಡಿದೆ ಎಂದರು.

ವಿಧಾನಸೌಧದ ಮುಂದೆ 2.5 ಎಕರೆ ಜಾಗದಲ್ಲಿ ಮಹರ್ಷಿ ವಾಲ್ಮೀಕಿ ತಪೋವನ ಹಾಗೂ ಅಲ್ಲೇ 25 ಅಡಿ ಉದ್ದದ ವಾಲ್ಮೀಕಿ ಪುತ್ಥಳಿ ಸ್ಥಾಪನೆ ಮಾಡುವ ಮೂಲಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ವಾಲ್ಮೀಕಿ ಜನಾಂಗಕ್ಕೆ ಕೊಡುಗೆ ನೀಡಿದೆ ಎಂದು ಹೇಳಿದರು.

ಮೋದಿ ಅವರು ಬಿಜೆಪಿಯ 10 ವರ್ಷದ ಆಡಳಿತದಲ್ಲಿ 180 ಲಕ್ಷ ಕೋಟಿ ರೂ.ಗಳಷ್ಟು ಸಾಲ ಮಾಡಿ ದೇಶದ ಆರ್ಥಿಕ ವ್ಯವಸ್ಥೆ ಕೆಡಿಸಿದ್ದಾರೆ ಎಂದು ದೂರಿದರು.

ಎಸ್ಸಿ, ಎಸ್ಟಿ, (5ನೇ ಪುಟಕ್ಕೆ)



### ವೈಭವದಿ ಜರುಗಿದ ಚಿಗಟೇರಿ ನಾರದಮುನಿ ರಥೋತ್ಸವ

ಚಿಗಟೇರಿ, ಏ. 28- ಇತಿಹಾಸ ಪ್ರಸಿದ್ಧ ಚಿಗಟೇರಿ ನಾರದಮುನಿ ರಥೋತ್ಸವವು ಭಾನುವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ವೈಭವದಿಂದ ನೆರವೇರಿತು. ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅಣಬೇರು ರಾಜಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಸಂಕೋಳ್ ಚಂದ್ರಶೇಖರ್, ಸದಸ್ಯರಾದ ವೊಡ್ಡಿನಳ್ಳಿ ಷಡಕಣ್ಣ, ಎಲೆಬೇತೂರು ಕರಿಬಸಪ್ಪ, ಕಲಪನಹಳ್ಳಿ ಬಸವಲಿಂಗಪ್ಪ, ಹೊಳಲ್ಕೆರೆ ವೇದಮೂರ್ತಿ, ಪಲ್ಲಾಗಟ್ಟೆ ನಾಗರಾಜ, ಚಿಗಟೇರಿ ದ್ಯಾಮನಗೌಡ, ಹನಗವಾಡಿ ಮಂಜಣ್ಣ, ಹಲ್ಲೇಹಾಳ್ ನಾರಪ್ಪ, ಇಂಜಿನಿಯರ್ ಜಿ. ಬಿ. ಸುರೇಶ ಕುಮಾರ್, ನಾಗರಾಜ ಸಿರಿಗೆರೆ, ಗ್ರಾಮ ಪಂಚಾಯತಿ ಅಧ್ಯಕ್ಷ ನಾಗರಾಜ, ಉಪಾಧ್ಯಕ್ಷರಾದ ಹಾಲಮ್ಮ ಮತ್ತು ಸದಸ್ಯರು, ಪಿಡಿಓ, ಸಿಬ್ಬಂದಿ, ಅರ್ಚಕರು, ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಕಾಂಗ್ರೆಸ್ ಅಭ್ಯರ್ಥಿಗೆ ರೈತ ಸಂಘದಿಂದ ಬೆಂಬಲ

## ✦ ಮೇ 4ಕ್ಕೆ ಪ್ರಿಯಾಂಕ ಗಾಂಧಿ ಆಗಮನ ✦ ರೈತರಿಂದ ಆನೆ ಬಲ : ಎಸ್ಸೆಸ್ಸೆಂ



### ಕಾಂಗ್ರೆಸ್ ಅಭ್ಯರ್ಥಿಗೆ ಬಡ ರೈತನಿಂದ 20 ಸಾವಿರ

**ಚುನಾವಣಾ ಖರ್ಚಿಗಾಗಿ ಯಲೋದಹಳ್ಳಿ ಬಡ ರೈತ ಕಾಳೇಶ್ ಅವರು ಸಭೆಯಲ್ಲಿ, ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ಅವರಿಗೆ 20 ಸಾವಿರ ರೂಪಾಯಿ ಚುನಾವಣಾ ಖರ್ಚಿಗೆ ದೇಣಿಗೆ ನೀಡಿದರು. ಬಡ ರೈತನಾಗಿದ್ದರೂ ಯಲೋದಹಳ್ಳಿ ಕಾಳೇಶ್ ಅವರ ಸಹಾಯ ದೊಡ್ಡದು. ಅವರ ಅಭಿಮಾನ ಕೋಟಿ ಕೊಟ್ಟರು ಸಾಲದು, ಇದು ಗೆಲುವಿನ ಶುಭ ಸಂಕೇತ ಎಂದು ರೈತನ ಸೇವೆ ಸ್ಮರಿಸಿದರು.**

ದಾವಣಗೆರೆ, ಏ. 28 - ದೇಶದ ಬೆನ್ನೆಲುಬು ರೈತರು, ದಾವಣಗೆರೆ ಕಾಂಗ್ರೆಸ್ ಪಕ್ಷಕ್ಕೆ ಬೆನ್ನೆಲು ಬಾಗಿರುವುದು ಸಂತಸದ ಸಂಗತಿ, ರೈತ ಸಂಘದವರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿರುವುದು ದಾವಣಗೆರೆಯ ಕಾಂಗ್ರೆಸ್ ಅಭ್ಯರ್ಥಿಗೆ ಆನೆ ಬಲ ಬಂದಂತಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ನಗರದ ಎಂಸಿಸಿ ಬಿ ಬ್ಲಾಕ್‌ನ ಕಾಂಗ್ರೆಸ್ ಪಕ್ಷದ ಕಚೇರಿ ಆವರಣದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸುವ ಸಭೆಯಲ್ಲಿ ಮಾತನಾಡಿದರು.

ನಮಗೆ ಎಲ್ಲೇ ಹೋದರು ರೈತ ಸಂಘದವರು ಪರಿಚಿತರಾಗಿರುವರು, ಆನಗೋಡು ಗ್ರಾಮದಲ್ಲಿ ರೈತರ ಹುತಾತ್ಮ ಭವನ ಮಾಡಬೇಕು, ರೈತರ ಸಮುದಾಯ ಭವನ ನಿರ್ಮಿಸಬೇಕು, ಕೈಗೆಟಕುವ ದರದಲ್ಲಿ ಕೃಷಿ ಸಾಮಗ್ರಿಗಳು ಸಿಗಬೇಕು ಎಂಬ ಹಲವು ಬೇಡಿಕೆಗಳಿಗೆ ಅವುಗಳನ್ನು ಹಂತ ಹಂತವಾಗಿ ಸರಿಪಡಿಸಲಾಗುವುದು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದೊಡ್ಡ ಪ್ರಮಾಣದ ರೈತರಿಗೆ ಉಪಯೋಗ ಆಗಿದೆಯೇ ಹೊರತು ಸಣ್ಣ ಹಾಗೂ ಬಡ ರೈತರಿಗೆ ಉಪಯೋಗವಾಗಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ರೈತನ ಮಗಳು, ರೈತರ ಕಷ್ಟಗಳನ್ನು ಕಣ್ಣಾರೆ ಕಂಡವರು.

ಕೃಷಿ (5ನೇ ಪುಟಕ್ಕೆ)

# ಅಸ್ಪೃಶ್ಯತೆಯಿಂದ ಕಾಪಾಡಿದ ಪಕ್ಷಕ್ಕೆ ಬೆಂಬಲಿಸಿ

## ಮಾದಿಗ ಸಮುದಾಯದ ಸಭೆಯಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ ಕರೆ

ದಾವಣಗೆರೆ, ಏ. 28- ಗಾಂಧೀಜಿ, ನೆಹರು ಅಂತಹ ಕಾಂಗ್ರೆಸ್ಸಿನ ನಾಯಕರು ನಮ್ಮ ಹಿರಿಯರನ್ನು ಅಸ್ಪೃಶ್ಯತೆಯಿಂದ ಕಾಪಾಡಿದ್ದಾರೆ. ಹೊರತು ಬಿಜೆಪಿಗರು ಅಲ್ಲ ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ನಗರದ ಅಕ್ಕ ಮಹಾದೇವಿ ಸಮುದಾಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಮಾದಿಗ ಸಮುದಾಯದ ಚುನಾವಣಾ ಸಭೆಯಲ್ಲಿ ಅವರು ಮಾತನಾಡಿದರು.

ಮಾದಿಗ ಸಮುದಾಯದ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಅಪಾರ ಕೊಡುಗೆ ನೀಡಿದೆ ಆದ್ದರಿಂದ ನಮ್ಮ ಸಮಾಜವು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಮೂಲಕ ಋಣ ತೀರಿಸಬೇಕು ಎಂದು ಹೇಳಿದರು.

ಮಾದಿಗರು ಕಾಂಗ್ರೆಸ್ಸಿನ ಸಾಂಪ್ರದಾಯಿಕ ಮತದಾರರು. ಈಗ ನಾವೆಲ್ಲರೂ ಒಗ್ಗಟ್ಟಿನಿಂದ ಬಸವಣ್ಣನ ಕನಸನ್ನು ಸಾಕಾರಗೊಳಿಸಿದ ಹಾಗೂ ಸಮಸಮಾಜದ ಕನಸು ಕಂಡ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದರು.

ಶಾಮನೂರು ಕುಟುಂಬವು ಎಸ್.ಎಂ. ಕೃಷ್ಣ ಬಡಾವಣೆ ನಿರ್ಮಿಸಿ ಸೂರು ಕಲ್ಪಿಸಿದ್ದಾರೆ ಮತ್ತು ಚಿಕ್ಕಮ್ಮನಹಟ್ಟಿ ಬಡಾವಣೆಯಲ್ಲಿ 400 ನಿವೇಶನಗಳನ್ನು ಕೊಟ್ಟಿದ್ದಾರೆ. ಹಿಂದಿನಿಂದಲೂ ಅವಕಾಶ ವಂಚಿತ ಸಮುದಾಯಗಳ ಪರ ಚಿಂತಿಸುವ ಶಾಮನೂರು ಕುಟುಂಬವನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.



ಬಿಜೆಪಿ ತನ್ನ ವಿಪಕ್ಷಗಳ ವಿರುದ್ಧ ಇಡಿ, ಸಿಬಿಐ, ಮೂಲಕ ದಬ್ಬಾಳಿಕೆ ಮಾಡುತ್ತಿದೆ, ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯಿದ್ದು, ಯಾವುದೇ ಕಾರಣಕ್ಕೂ ಹಿಂಜರಿಯಬಾರದು ಎಂದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮಾತನಾಡಿ, ಬಿಜೆಪಿಯು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದು ಕೊಳ್ಳುವ ಜತೆಗೆ ಐಟಿ ರೈಡ್ ಮಾಡಿಸುತ್ತಾ ಸರ್ವಾಧಿಕಾರದ ಆಡಳಿತ ಮಾಡುತ್ತಿದೆ ಎಂದರು.

ಪ್ರಧಾನ ಮಂತ್ರಿ ಮೋದಿ ಅವರು ಬಡವರಿಗೆ ಅನುಕೂಲ ಮಾಡದೇ ಕೇವಲ ಶ್ರೀಮಂತರನ್ನು ಉಳಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ದೂರಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಈ ಹಿಂದೆ ಸಿಎಂ (5ನೇ ಪುಟಕ್ಕೆ)

# ಹಳೇ ಹರಲಾಪುರದ ಜೆಡಿಎಸ್ ಮುಖಂಡರು ಕಾಂಗ್ರೆಸ್ ಸೇರ್ಪಡೆ



ಹರಪನಹಳ್ಳಿ, ಏ.28- ಅರಸಿಕೆರೆ ಗ್ರಾಮದಲ್ಲಿನ ಕಾಂಗ್ರೆಸ್ ಪ್ರಚಾರ ಕಾರ್ಯಕ್ರಮದಲ್ಲಿ ಹರಿಹರ ತಾಲ್ಲೂಕಿನ ಹಳೇ ಹರಲಾಪುರ ಗ್ರಾಮದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಅವರನ್ನು ಪಕ್ಷಕ್ಕೆ ಆತ್ಮೀಯವಾಗಿ ಬರಮಾಡಿಕೊಂಡ ಸಚಿವರು, ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಜೆಡಿಎಸ್ ಪಕ್ಷದ ಹಳೇ ಹರಲಾಪುರ ಗ್ರಾಮ ಪಂಚಾಯ್ತಿಯ ಮಾಜಿ ಅಧ್ಯಕ್ಷರಾದ ಹುಲಿಗೆಮ್ಮ, ಚಂದ್ರಶೇಖರ್, ಗಂಗಾಧರಗೌಡ ಮುಖಂಡರಾದ ಮಂಜುನಾಥ ಎಂ, ಕುರುವತ್ತಪ್ಪ, ಮಂಜುನಾಥ ಜಾಣ, ಗುರುಮೂರ್ತಿ, ಸಿದ್ದಪ್ಪ, ಇಂಧೂದರ, ಪ್ರಶಾಂತ್ ಬಳ್ಳಾರಿ, ಹಜ್ಮತ್‌ವುಲ್ಲಾ, ಸಾವಿತ್ರಮ್ಮ, ಅಕ್ರಂ ಪಾಷಾ, ರಹಮತ್ ಉಲ್ಲಾ, ಸಾವಿತ್ರಮ್ಮ, ಅನೀಸ್, ಸಮಿವುಲ್ಲಾ, ಹರೀಶ್, ಸಂತೋಷ (ಗುಂಡಾ), ಎಂ.ಇಬ್ರಾಹಿಂ ಹಾಗೂ ಚಿಗರಿ ಮಂಜುನಾಥ್ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

ಈ ವೇಳೆ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್, ವಕೀಲರ ಘಟಕದ ಅಧ್ಯಕ್ಷ ಪ್ರಕಾಶ್ ಪಾಟೀಲ್, ಹಾಲೇಶ್ ಗೌಡ ಹಾಗೂ ಇತರರು ಇದ್ದರು.

# ಐ.ಎಂ.ಎ ಮಹಿಳಾ ವಿಭಾಗದಿಂದ ಉಪನ್ಯಾಸ



ದಾವಣಗೆರೆ, ಏ.28- ನಗರದ ಐ.ಎಂ.ಎ ಮಹಿಳಾ ವಿಭಾಗದಿಂದ ನಿನ್ನೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ. ಸುನೀಲ್ ಬ್ಯಾಡಗಿ ಅವರು ಸ್ತನ ಹಾಗೂ ಗರ್ಭಕೋಶ ಕ್ಯಾನ್ಸರ್ ಬಗ್ಗೆ ಮಾತನಾಡಿದರು. ಐ.ಎಂ.ಎ ಮಹಿಳಾ ವಿಭಾಗದ ಅಧ್ಯಕ್ಷರಾದ ತ್ರಿವೇಣಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪ್ರಭಾ ಉಪಸ್ಥಿತರಿದ್ದರು. ಗಂಗಾಬಿರ ರೇಖಾ, ಪ್ರಿಯಾ, ಅಶ್ವಿನಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

# ಹೊನ್ನಾಳಿ ತಾ.ನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಇಂದು ಮತಯಾಚನೆ ನಡೆಸಲಿದ್ದಾರೆ. ಬೆಳಗ್ಗೆ 10 ಕ್ಕೆ ಹನುಮಸಾಗರ ಗ್ರಾಪಂ, 10.30 ಕ್ಕೆ ಎಚ್.ಗೋಪಗೊಂಡನಹಳ್ಳಿ, 11 ಕ್ಕೆ ಹತ್ತೂರು, 11.30 ಕ್ಕೆ ಕತ್ತಿಗಿ, 12 ಕ್ಕೆ ಜೀನಹಳ್ಳಿ, ಮಧ್ಯಾಹ್ನ 12.30 ಕ್ಕೆ ಗುಡ್ಡೇಹಳ್ಳಿ, 1 ಕ್ಕೆ ಬೆಳಗುತ್ತಿ, 1.30ಕ್ಕೆ ಯರಗನಾಳು, 2ಕ್ಕೆ ಸುರಹೊನ್ನೆ, 2.30 ಕ್ಕೆ ಚಿನ್ನಿಕಟ್ಟೆ, 3 ಕ್ಕೆ ಸವಳಂಗ, 3.30 ಕ್ಕೆ ಚಟ್ನಹಳ್ಳಿ, 4 ಕ್ಕೆ ಫಲನವಹಳ್ಳಿ, 4.30ಕ್ಕೆ ನ್ಯಾಮತಿ ಪಟ್ಟಣ ವ್ಯಾಪ್ತಿಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಮತಯಾಚನೆ ನಡೆಸಲಿದ್ದಾರೆ.

# ಗ್ಯಾರೇಜ್, ವರ್ಕ್ ಶಾಪ್ ಕಾರ್ಮಿಕರ ಜೊತೆ ವಿನಯ್

ದಾವಣಗೆರೆ, ಏ. 28- ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯ್ ಕುಮಾರ್ ಅವರು ಜಿಲ್ಲಾ ಗ್ಯಾರೇಜ್, ವರ್ಕ್ ಶಾಪ್ ಮಾಲೀಕರು ಮತ್ತು ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುವ ಮೂಲಕ ಮತ ಯಾಚಿಸಿದರು.

ಫಾರೂಖ್, ನಾಗರಾಜ್, ಸೈಯ್ಯದ್ ಯೂಸುಫ್, ಸೈಯದ್ ತೌಫಿಕ್ ಮತ್ತಿತರರು ಇದ್ದರು.

ಈ ವೇಳೆ ಮಾತನಾಡಿದ ವಿನಯ್ ಕುಮಾರ್, ಗ್ಯಾರೇಜ್, ವರ್ಕ್ ಶಾಪ್ ಕೆಲಸ ಮಾಡುವವರ ಪರಿಸ್ಥಿತಿ ಚೆನ್ನಾಗಿ ಅರಿತಿದ್ದೇನೆ. ನಿಮ್ಮ ಬದುಕು ಬದಲಾಯಿಸಲು ಶ್ರಮಿಸುತ್ತೇನೆ. ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸುವ ಜವಾಬ್ದಾರಿ ನನ್ನದು. ಒಂದು ಬಾರಿ ನನ್ನನ್ನು ಆರಿಸಿ ಕಳುಹಿಸಿ. ಆಮೇಲೆ ನಾನು ಮಾತನಾಡುವುದಿಲ್ಲ. ನನ್ನ ಕೆಲಸ ಮಾತನಾಡುವಂತೆ ಮಾಡಿ ಮತ್ತೆ ನಿಮ್ಮ ಬಳಿ ಬರುತ್ತೇನೆ ಎಂದು ಭರವಸೆ ನೀಡಿದರು.



# ಮಾದಾರ ಚೆನ್ನಯ್ಯ ಗುರುಪೀಠದಲ್ಲಿ ಸಿದ್ದೇಶ್ವರ

ದಾವಣಗೆರೆ, ಏ.28- ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸ್ವಾಮೀಜಿ ಅವರು ಲೋಕ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಿದರು. ಈ ವೇಳೆ ಮಾಜಿ ಸಚಿವ ಮುರುಗೇಶ್ ನಿರಾಣಿ, ಚಿತ್ರದುರ್ಗದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಜೊತೆಯಲ್ಲಿದ್ದರು.



# ನಗರದಲ್ಲಿ ಇಂದು ವಿಶ್ವ ನೃತ್ಯ ಪ್ರದರ್ಶನ

ನಮನ ಅಕಾಡೆಮಿ ಮತ್ತು ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಐ.ಕ್ಯೂ.ಎ.ಸಿ. ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದ ಅಡಿಯಲ್ಲಿ ವಿಶ್ವ ನೃತ್ಯ ದಿನ - 2024 ಅಂಗವಾಗಿ ಭರತ ನಾಟ್ಯಂನ ನಟುವಾಂಗಂ ಮತ್ತು ದಶವಿಧ ಅಡುವುಗಳು ಬಗ್ಗೆ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಯನ್ನು ಎ.ವಿ.ಕೆ. ಕಾಲೇಜು ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಏರ್ಪಡಿಸಲಾಗಿದೆ.

ಡಾ.ಎಂ.ಜಿ. ಈಶ್ವರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶ್ರೀಮತಿ ಕಮಲಾ ಸೊಪ್ಪಿನ್ ಅಧ್ಯಕ್ಷತೆ ವಹಿಸುವರು. ಕು. ಪೂಜಾ ರುದ್ರೇಶ್ ಢಗೆ ಮತ್ತು ತಂಡ, ರಾಣೇಬೆನ್ನೂರು ಮತ್ತು ನಮನ ಅಕಾಡೆಮಿ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ನಡೆಯುವುದು.

# ನಗರದಲ್ಲಿ ಇಂದು ನವೋದಯ ಚಾರಿಟಬಲ್ ಟ್ರಸ್ಟ್‌ನಿಂದ ಡಾ. ಪ್ರಭಾಗೆ ಬೆಂಬಲ

ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ವ್ಯಕ್ತಪಡಿಸುವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಜೆ.ಆರ್.ಷಣ್ಮುಖಪ್ಪ ಅವರ ನೇತೃತ್ವದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟಿನ 5 ಸಾವಿರಕ್ಕೂ ಅಧಿಕ ಸದಸ್ಯೆಯರು, ಮೇಲ್ವಿಚಾರಕಿಯರು ಭಾಗವಹಿಸಲಿದ್ದಾರೆ.

ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

# ಗ್ಯಾರಂಟಿ ಕೊಡಲು ಕಾಂಗ್ರೆಸ್ ಸರ್ಕಾರ ರಚನೆ ಆಗಲ್ಲ : ಭೈರತಿ ಬಸವರಾಜ

ರಾಣೇಬೆನ್ನೂರು, ಏ. 28 - ಈಗಾಗಲೇ ಬಿಜೆಪಿ ಒಂದು ಸ್ಥಾನ ಪಡೆದಿದೆ. ಇನ್ನು 399 ಸ್ಥಾನ ಗೆಲ್ಲುವ ಪ್ರಯತ್ನ ನಮ್ಮದು. ನಿನ್ನೆ ನಡೆದ ರಾಜ್ಯದ 14 ಸ್ಥಾನಗಳನ್ನು ಬಿಜೆಪಿ ಗೆಲ್ಲಲಿದೆ. ಮೇ 7 ರಂದು ನಡೆಯುವ 14 ಸ್ಥಾನಗಳು ಬಿಜೆಪಿ ಪಾಲಾಗಲಿವೆ. ಪರಿಸ್ಥಿತಿ ಹೀಗಿದ್ದು, ಕಾಂಗ್ರೆಸ್ ಸರ್ಕಾರ ರಚಿಸುವುದಾಗಲೀ, ಗ್ಯಾರಂಟಿ ಕೊಡುವುದಾಗಲೀ ಅಸಾಧ್ಯ ಎಂದು ಮಾಜಿ ಸಚಿವ ಭೈರತಿ ಬಸವರಾಜ ಹೇಳಿದರು.



ರಾಣೇಬೆನ್ನೂರು ಕುರುಬಗೇರಿಯ ಸೊಪ್ಪಿನ ಪೇಟೆ ಹಾಗೂ ಮೆಡ್ಲೇರಿ ಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ತಾವು ಅಧಿಕಾರದಲ್ಲಿದ್ದಾಗ ರಾಣೇಬೆನ್ನೂರು ನಗರಕ್ಕೆ 24×7 ಕುಡಿಯುವ ನೀರು ಸರಬರಾಜಿಗೆ ಅಂದಿನ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಆಣತಿಯಂತೆ 120 ಕೋಟಿ ಹಣ ಬಿಡುಗಡೆ ಮಾಡಿದ್ದು ಸೇರಿದಂತೆ, ಅಂದಿನ ಶಾಸಕ ಅರುಣ ಕುಮಾರ ಪೂಜಾರ ಅವರ ಪ್ರಯತ್ನಕ್ಕೆ ಸಹಕಾರ ನೀಡಿ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು ಎಂದು ಬೈರತಿ ಬಸವರಾಜ ವಿವರಿಸಿದರು.

**ರಾಣೇಬೆನ್ನೂರು**

ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಅವರು ಎಸ್ಟಿ ಮೀಸಲಾತಿಗಾಗಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿ ಸರ್ವ ಸಮಾಜದವರನ್ನು ಸಮನಾಗಿ ಕಂಡವರು. ರಾಣೇಬೆನ್ನೂರು ಹಾಗೂ ಜಿಲ್ಲೆಯಾದ್ಯಂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿಯ ಹರಿಕಾರರಾಗಿದ್ದರು ಎಂದು ಮಾಜಿ ಶಾಸಕ ಅರುಣ ಪೂಜಾರ ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡ್ರನ್ನು ಶಿವಣ್ಣನವರ ಮಾತನಾಡಿ, ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಬಿಜೆಪಿ ಗೆಲ್ಲಿಸಬೇಕು ಎಂದರು.

ವೇದಿಕೆಯಲ್ಲಿ ಮುಖಂಡರಾದ ಭಾರತಿ ಜಂಬಗಿ, ಸಂತೋಷ ಪಾಟೀಲ, ಚಂದ್ರಶೇಖರ, ಪ್ರಕಾಶ ಪೂಜಾರ, ಕರಬಸಪ್ಪ ಮಾಕನೂರ ಮತ್ತಿತರರಿದ್ದರು.

**ಕುರುಬರಿಗೆ ಭೈರತಿ ವಿಶೇಷ :** ನನ್ನ ಸಮಾಜದ ಬಂಧುಗಳು ಯಾವುದೇ ಅಪಪ್ರಚಾರಕ್ಕೆ ಕಿವಿಗೊಡದೆ ಎಲ್ಲರನ್ನೂ ಸಮನಾಗಿ ಕಾಣುವ ಬಿಜೆಪಿ ಪಕ್ಷಕ್ಕೆ ಮತ ನೀಡಲೇಬೇಕು ಎಂದು ತಮ್ಮಲ್ಲಿ ವಿಶೇಷವಾಗಿ ಕೇಳಿಕೊಳ್ಳುತ್ತೇನೆ ಎಂದು ರಾಣೇಬೆನ್ನೂರು ನಗರ ಹಾಗೂ ಮೆಡ್ಲೇರಿ ಗ್ರಾಮದಲ್ಲಿ ಬಹಿರಂಗ ಭಾಷಣ ಮಾಡಿದ ಮಾಜಿ ಸಚಿವ ಭೈರತಿ ಬಸವರಾಜ ಅವರು ಕುರುಬ ಸಮಾಜವನ್ನು ಉದ್ದೇಶಿಸಿ ಮನವಿ ಮಾಡಿದರು.

# ಎಲೆಬೇತೂರಿನಲ್ಲಿ ಇಂದು ಕಸಾಪದಿಂದ ದತ್ತಿ ಉಪನ್ಯಾಸ


ಜಿಲ್ಲಾ ಮತ್ತು ತಾಲ್ಲೂಕು ಕಸಾಪ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ (ಎಲೇಬೇತೂರು), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ , ಶ್ರೀ ಒಂದೇ ಮಾತರಂ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ (ಎಲೇಬೇತೂರು) ಹಾಗೂ ಆರೋಗ್ಯ ಇಲಾಖೆ (ಎಲೆಬೇತೂರು) ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11ಕ್ಕೆ ಎಲೆಬೇತೂರಿನ ಗ್ರಾಮ ಪಂಚಾಯಿತಿ ಆವರಣದಲ್ಲಿ ದತ್ತಿ ಉಪನ್ಯಾಸ ಹಾಗೂ ಮತದಾನ ಜಾಗೃತಿ ಅಭಿಯಾನದ ಅಂಗವಾಗಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ರಾಮಭೋವಿ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ರುದ್ರಮುನಿ ಹಿರೇಮಠ್ ಅವರು ಮತದಾನ ಜಾಗೃತಿ ಕುರಿತಾಗಿ ಉಪನ್ಯಾಸ ನೀಡುವರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಯನ್ನಾಡಲಿದ್ದಾರೆ.

ಶ್ರೀಮತಿ ಅಂಬಿಕಾ ಎ, ಪಿಡಿಓ ಇವರು ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಿದ್ದಾರೆ.

ಮುಖ್ಯ ಅತಿಥಿಗಳು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕ ಶ್ರೀಮತಿ ಗಂಗವ್ವ ಅಜ್ಜಪ್ಪ, ಒಂದೇ ಮಾತರಂ ಸಂಜೀವಿನಿ ಒಕ್ಕೂಟದ ಅಧ್ಯಕ್ಷ ಆಶಾ ಡಿ.ಟಿ, ಬೇತೂರಿನ ಸಮುದಾಯ ಆರೋಗ್ಯ ಅಧಿಕಾರಿ ಶ್ರೀಮತಿ ಗುಣಶೀಲ ಭಾಗವಹಿಸುವರು ಎಂದು ತಾಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸ್ವಕುಳಸಾಳಿ ಮಹಿಳಾ ಘಟಕದ ಸಭೆ



ಸ್ವಕುಳಸಾಳಿ ಸಮಾಜದ ಶ್ರೀ ಜಿಹ್ವೇಶ್ವರ ಮಹಿಳಾ ಮಂಡಳಿಯ ಸರ್ವಸದಸ್ಯರ ಸಭೆ ಶ್ರೀ ವೀರ ಮದಕರಿ ನಾಯಕ ವೃತ್ತದ ಬಳಿಯಿರುವ ಸ್ವಕುಳಸಾಳಿ ಸಮಾಜದ ಶ್ರೀ ಜಿಹ್ವೇಶ್ವರ ಮಂದಿರದಲ್ಲಿ ಇಂದು ಸಂಜೆ 4ಕ್ಕೆ ನಡೆಯಲಿದೆ. ಶ್ರೀ ಜಿಹ್ವೇಶ್ವರ ಮಹಿಳಾ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಪದ್ಮಾವತಿ ವಾಂಜ್ರೆ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಭೆಯಲ್ಲಿ ಸಮಾಜದ ಮಹಿಳೆಯರು ಭಾಗವಹಿಸುವಂತೆ ಕಾರ್ಯದರ್ಶಿ ಶ್ರೀಮತಿ ಸುಜಾತ ರಾಮಚಂದ್ರ ರೋಖಡೆ ಕೋರಿದ್ದಾರೆ.

# ಮಾಯಕೊಂಡ ಕ್ಷೇತ್ರದಲ್ಲಿ ಇಂದು ಜಿ. ಬಿ. ವಿನಯ್ ಕುಮಾರ್ ಪ್ರಚಾರ



ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರು ಇಂದು ಮತಯಾಚನೆ ಮಾಡಲಿದ್ದಾರೆ.

ಬೆಳಿಗ್ಗೆ 8 ಗಂಟೆಗೆ ತೋಳಹುಣಸೆ, 8.30ಕ್ಕೆ ಕುರ್ಕಿ, 9 ಗಂಟೆಗೆ ಹಿರೇತೊಗಲೇರಿ, 9.15ಕ್ಕೆ ಚಿಕ್ಕತೊಗಲೇರಿ, 9.45ಕ್ಕೆ ಅತ್ತಿಗೆರೆ, 10.15ಕ್ಕೆ ರಾಮಗೊಂಡನಹಳ್ಳಿ, 10.45ಕ್ಕೆ ದ್ಯಾಮೇನಹಳ್ಳಿ, 11.30ಕ್ಕೆ ಬಾಡ, ಮಧ್ಯಾಹ್ನ 12 ಗಂಟೆಗೆ ಕಂದಗಲ್ಲು, 1 ಗಂಟೆಗೆ ನಲ್ಕುಂದ, 1.15ಕ್ಕೆ ವಿಠಲಾಪುರ, 1.45ಕ್ಕೆ ಒಂಟಿಹಾಳು, 2.15ಕ್ಕೆ ಶಂಕರನಹಳ್ಳಿ, 3 ಗಂಟೆಗೆ ಅಣಬೇರು, 3.15ಕ್ಕೆ ಹಿಂಡಸ ಘಟ್ಟ, 3.30ಕ್ಕೆ ಹೆಚ್. ಬಸಾಪುರ, 3.45ಕ್ಕೆ ಹುಚ್ಚವನಹಳ್ಳಿ, ಸಂಜೆ 4 ಗಂಟೆಗೆ ಹೆದ್ನೆ - ರಾಂಪುರ, 4.15ಕ್ಕೆ ಮಾಯಕೊಂಡ, 4.30ಕ್ಕೆ ದೊಡ್ಡ ಮಾಗಡಿ, 4.45ಕ್ಕೆ ಸಣ್ಣ ಮಾಗಡಿ, 5 ಗಂಟೆಗೆ ಅಣ್ಣಾಪುರ, 5.15ಕ್ಕೆ ಪರಶುರಾಂಪುರ, 5.30ಕ್ಕೆ ದಿಂಡದಹಳ್ಳಿ, 5.45ಕ್ಕೆ ಕೊಡಗನೂರು ಕ್ರಾಸ್, 6 ಗಂಟೆಗೆ ಸುಲ್ತಾನಿಪುರ, 6.15ಕ್ಕೆ ನೇರ್ಲಿಗೆ, 6.30ಕ್ಕೆ ಆನಗೋಡು ಗ್ರಾಮಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

# ಮಾಯಕೊಂಡ ಕ್ಷೇತ್ರದಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಎಸ್ಸೆಸ್ಸೆಂ ಪ್ರವಾಸ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಕೊಡಗನೂರು ಗ್ರಾಮದಿಂದ ಬೆಳಿಗ್ಗೆ 9 ಗಂಟೆಯಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಗಂಗನಕಟ್ಟೆ, ಚಿನ್ನಸಮುದ್ರ, ನರಗನಹಳ್ಳಿ, ಹೊನ್ನನಾಯಕನಹಳ್ಳಿ, ಬಾವಿಹಾಳು, ದಿಂಡದಹಳ್ಳಿ, ಮಾಗಡಿ, ಮಾಯಕೊಂಡ, ಹುಚ್ಚವ್ವನಹಳ್ಳಿ, ಬಸವಾಪುರ, ಕ್ಯಾತನಹಳ್ಳಿ, ನಲ್ಕುಂದ, ಹಿಂಡಸಘಟ್ಟ, ಅಣಬೇರು, ಬಾಡ, ಕಂದಗಲ್ಲು, ಮಳಲಕೆರೆ, ದ್ಯಾಮೇನಹಳ್ಳಿ, ರಾಮಗೊಂಡನಹಳ್ಳಿ, ಅತ್ತಿಗೆರೆ, ಚಿಕ್ಕತೊಗಲೇರಿ, ಕುರ್ಕಿ, ತೋಳಹುಣಸೆ ಗ್ರಾಮಗಳಲ್ಲಿ ರಾತ್ರಿ 9.30 ಗಂಟೆಯವರೆಗೆ ಮತಯಾಚನೆ ಮಾಡುವರು.

ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ಕೆ.ಎಸ್. ಬಸವಂತಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ತಿಳಿಸಿದ್ದಾರೆ.

# ಮೇಣದ ಬತ್ತಿ ಬೆಳಗಿಸಿ ನೇಹಾಗೆ ಶ್ರದ್ಧಾಂಜಲಿ

ದಾವಣಗೆರೆ, ಏ.28- ಹುಬ್ಬಳ್ಳಿಯ ಕಾರ್ಪೊರೇಟರ್ ಪುತ್ರಿ ನೇಹಾ ಹತ್ಯೆಯನ್ನು ಖಂಡಿಸಿ, ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ನಗರದ ಗುಂಡಿ ವೃತ್ತದಲ್ಲಿ ಕ್ಯಾಂಡಲ್ ಹಿಡಿದು ನೇಹಾ ಆತ್ಮಕ್ಕೆ ಶಾಂತಿ ಕೋರಿದರು.

ಈ ವೇಳೆ ಪರಿಷತ್ ಅಧ್ಯಕ್ಷ ಎ.ಜೆ. ರವಿಕುಮಾರ್ ಮಾತನಾಡಿ, ಈ ಹೀನ ಕೃತ್ಯದಿಂದ ಪಾಲಕರು ಹೆಣ್ಣು ಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಕಳುಹಿಸಲು ಭಯ ಪಡುತ್ತಿದ್ದಾರೆ ಎಂದರು.

ರೆಡ್ ಕ್ರಾಸ್ ಸಂಸ್ಥೆಯ ಗೌಡ್ರು ಚನ್ನಬಸಪ್ಪ ಮಾತನಾಡಿ, ರಾಜಕೀಯ ಪಕ್ಷಗಳು ನೇಹಾ ಹತ್ಯೆ ಪ್ರಕರಣಕ್ಕೆ ರಾಜಕೀಯ ಬಣ್ಣ ಹಚ್ಚಬಾರದು. ರಾಜಕೀಯವಾಗಿ ಹೇಳಿಕೆ ನೀಡುವುದರಿಂದ ಅವರ ತಂದೆ-ತಾಯಿಯರಿಗೆ ನೋವಾಗುತ್ತದೆ ಎಂದು ಹೇಳಿದರು. ಪರಶುರಾಮ್, ರೋಟರಿ ಸಂಸ್ಥೆಯ ಜಯಣ್ಣ, ಶ್ರೀನಿವಾಸ್, ಎಸ್.ಬಿ. ಚಂದ್ರಶೇಖರ್, ಶಿವಕುಮಾರ್ ಶೆಟ್ಟರ್, ನಾಗರಾಜ್, ಕೇಶವ್ ಎಂ. ಶೇಟ್, ಮೃತ್ಯುಂಜಯಪ್ಪ, ಶ್ವೇತಾ ಇದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ಎ.ಬಿ. ಓಂಕಾರಪ್ಪ, ಅಜ್ಜಂಪುರ, ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಅನುದಾನಿತ ಸಂಘ ಹಸ್ತಾಂತರಕ್ಕಿದೆ
ಈಗಾಗಲೇ ಅನುದಾನ ಪಡೆಯುತ್ತಿರುವ ಸಂಘವು ಹಸ್ತಾಂತರಕ್ಕಿದೆ.
ಇಚ್ಚೆಯುಳ್ಳವರು ಸಂಪರ್ಕಿಸಿ.
97425 98520

ಬಾಡಿಗೆಗೆ
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಮೊದಲನೇ ಮಹಡಿ - 4000 ಅಡಿ
2. ಎರಡನೇ ಮಹಡಿ - 4000 ಅಡಿ
3. Terrace Floor - 4000 ಅಡಿ
4. Basement - 4000 ಅಡಿ
ಸಂಪರ್ಕಿಸಿ : ಮೊ.
94480 28103

ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ
ಪಿ.ಬಿ. ರಸ್ತೆಯಿಂದ ಒಳ ಹೋಗುವ ನೇರ ರಸ್ತೆಗೆ (M.R. Tyre Show room ಪಕ್ಕದ ರಸ್ತೆ) ಪೂರ್ವ ಮುಖವಾಗಿ ಇರುವ 25x88 ಅಡಿ ಅಳತೆಯ ಸೈಟು ಮಾರಾಟಕ್ಕೆ ಇದೆ. ಸಂಪರ್ಕಿಸಿ.
ಸುಪ್ರೀತ್ : 7259635931

ತಕ್ಷಣ ಬೇಕಾಗಿದ್ದಾರೆ
ದಾವಣಗೆರೆ, ಹರಿಹರ, ಬಸವಾಪಟ್ಟಣ, ಹಾವೇರಿ ಮತ್ತು ರಾಣೇಬೆನ್ನೂರಿನ ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐಟಿಐ ಮತ್ತು ಡಿಪ್ಲೋಮಾ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ. ಸಂಪರ್ಕಿಸಿ :
94822 57570 / 86608 12420

ಬೇಕಾಗಿದ್ದಾರೆ
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

ಹೊಸ ಜೀವನ
ಲಿಂಗಾಯತ 46 ವರ್ಷದ ಶ್ರೀಮಂತ ಮನೆತನದ ಆರ್ಥಿಕವಾಗಿ ಸಬಲರಾಗಿರುವ ಕುಟುಂಬವನ್ನು ತ್ಯಜಿಸಲ್ಪಟ್ಟಿರುವ ವ್ಯಕ್ತಿಗೆ, ಜೀವನ ಸಂಗಾತಿಯಾಗುವವರು ಸಂಪರ್ಕಿಸಿ.
98807 29108

ಬೇಕಾಗಿದ್ದಾರೆ
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
98450-35710, 77607-39990

ಮನೆ ಬಾಡಿಗೆಗಿದೆ
ಡೋರ್ ನಂ- 2390/1.
1ನೇ ಮಹಡಿ 2BHK
10ನೇಯ ಮುಖ್ಯ ರಸ್ತೆ. 2ನೇ ಕ್ರಾಸ್
MCC A ಬ್ಲಾಕ್ ದಾವಣಗೆರೆ.
97312 90416, 89711 75435

ಮನೆಗಳು ಲೀಸ್‌ಗಿವೆ
1BHK, RCC, 1ನೇ ಮಹಡಿ, ನಿಟುವಳ್ಳಿ, ಲೆನಿನ್ ನಗರ, ದಾವಣಗೆರೆ ಲೀಸ್ ಮೊತ್ತ 2 ಲಕ್ಷ, 2BHK RCC 2ನೇ ಮಹಡಿ, ಲೀಸ್ 5.5 ಲಕ್ಷ, 1BHK RCC 1ನೇ ಮಹಡಿ, ದೇವರಾಜ ಅರಸ್ ಬಡಾವಣೆ, ದಾವಣಗೆರೆ. ಲೀಸ್ 5 ಲಕ್ಷ, ಬೋರ್ ವೆಲ್/ಕಾರ್ಪೊರೇಷನ್ ನೀರಿನ ವ್ಯವಸ್ಥೆ, ಕಾರ್ ಪಾರ್ಕಿಂಗ್ ಹಾಗೂ ಪೂರ್ವ ಬಾಗಿಲು.
9741746205, 7349397287

ವೃದ್ಧಾಶ್ರಮಕ್ಕಾಗಿ ಬಿಲ್ಡಿಂಗ್ ಬಾಡಿಗೆಗೆ ಬೇಕಾಗಿದೆ
ದಾವಣಗೆರೆ ನಗರದಲ್ಲಿ ವೃದ್ಧಾಶ್ರಮಕ್ಕಾಗಿ ಗ್ರೌಂಡ್ ಫ್ಲೋರ್ ಬಿಲ್ಡಿಂಗ್ ಬಾಡಿಗೆಗೆ ಬೇಕಾಗಿದೆ. 75 ಜನಕ್ಕೆ ವಸತಿಯುತ ಅನುಕೂಲವಿರುವಂತಹ ಸುಸಜ್ಜಿತ ಬಿಲ್ಡಿಂಗ್ ಬೇಕಾಗಿದೆ. ಸಂಪರ್ಕಿಸಿ.
99455 63136

ಸುವರ್ಣಾವಕಾಶ
MG ಗೋಲ್ಡ್ ಕಂಪನಿ
ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಅಥವಾ ನೀವು ಅಡವು ಇಟ್ಟ ನಿಮ್ಮ ಚಿನ್ನಾಭರಣಗಳನ್ನು ಬಿಡಿಸಿ, ಇಂದಿನ ಸೂಕ್ತ ಬೆಲೆಗೆ ತೆಗೆದುಕೊಳ್ಳುತ್ತೇವೆ.
ಮೊ.: 9343546891, 7019426891

ಅಭಿನಯ ಭಾರತಿ ವಿದ್ಯಾಸಂಸ್ಥೆ (ರಿ)
ಅಭಿನಯ ಭಾರತಿ ಪ್ರೌಢಶಾಲೆ ವಿನೋಬನಗರ, ರಿಂಗ್ ರಸ್ತೆ, ದಾವಣಗೆರೆ, ವಿಧವೆ ಮಹಿಳೆಯರಿಗೆ ಮೊದಲ ಆದ್ಯತೆ. ಅಡುಗೆ ಸಹಾಯಕರು ಬೇಕಾಗಿದ್ದಾರೆ.
SC or ST - 1, OBC - 1, ಅರ್ಜಿ ಸಲ್ಲಿಸಲು ಕಡೆ ದಿನಾಂಕ : 2.5.2024. ಸಂಪರ್ಕಿಸಿ :
78990 72367

ಬೇಕಾಗಿದ್ದಾರೆ
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ.
99167 01303


ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ.
81056 99985
89715 04492

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್
ಹೋಲ್ ಸೇಲ್ ಸಿಮೆಂಟ್ ವ್ಯಾಪಾರಿಗಳು, ರಿಂಗ್ ರೋಡ್, ಎಸ್.ಎಸ್. ಲೇಔಟ್, ದಾವಣಗೆರೆ.
99457 49925
99807 53632

ಬೇಕಾಗಿದ್ದಾರೆ
ಮಾರ್ಕೆಟಿಂಗ್‌ಗಾಗಿ ಅನುಭವ ಇರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಸಮ್ಯಕ್ ಸೆರಾಮಿಕ್ಸ್
ಮೊ. : 80884 80339

ಮನೆ ಬಾಡಿಗೆಗೆ/ಲೀಸ್‌ಗಿದೆ
#187, ಡಿ ಬ್ಲಾಕ್, ನಾಗನೂರು ಮೇನ್ ರೋಡ್, ಜೆ.ಹೆಚ್. ಪಟೇಲ್ ನಗರ, ದಾವಣಗೆರೆಯಲ್ಲಿ ನೂತನವಾಗಿ ನಿರ್ಮಿಸಿರುವ ಮನೆ, ಮುನ್ಸಿಪಲ್/ಬೋರ್ ನೀರಿನ ಸೋಲಾರ್ ವ್ಯವಸ್ಥೆ ಇರುವ 2 BHK ಗ್ರೌಂಡ್ ಫ್ಲೋರ್, 1 BHK ಮನೆ ಬಾಡಿಗೆ/ಲೀಸ್‌ಗಿದೆ.
82967 46293, 99452 15240

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

Finance Advisor
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
78923 29921, 96326 11005

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಹೋಟೆಲ್‌ಗೆ ಚೈನೀಸ್ ಅಡುಗೆ ಮಾಡಲು ಹಾಗು ಹೆಲ್ಪರ್ ಹುಡುಗರು ಬೇಕಾಗಿದ್ದಾರೆ.
94823 72955

Reputed Footware Company showroom
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
99019 44554, 98801 56060

ಅಭಿನಯ ಭಾರತಿ ವಿದ್ಯಾಸಂಸ್ಥೆ (ರಿ)
ಮಾನಸ ಗಂಗೋತ್ರಿ HPS ಯಲ್ಲಮ್ಮನಗರ, ರಿಂಗ್ ರಸ್ತೆ, ದಾವಣಗೆರೆ. ಅಡುಗೆ ಸಹಾಯಕರ ಬೇಕಾಗಿದ್ದಾರೆ. ಮೊದಲ ಆದ್ಯತೆ ವಿಧವೆ ಮಹಿಳೆಯರಿಗೆ.
SC or ST - 1, ಸಾಮಾನ್ಯ - 1, ಅರ್ಜಿ ಸಲ್ಲಿಸುವ ಕಡೆ ದಿನಾಂಕ : 2.5.2024. ಸಂಪರ್ಕಿಸಿ :
78990 72367

WANTED -IMMEDIATE
required ITI Fitter-10.
Attractive salary with ESI and PF. Contact with bio-data, ambika furniture, 843, Ashoka road, Davangere.
99167 93795

ಬಿಸಿನೆಸ್ ಅವಕಾಶ
ಕೇವಲ ರೂ.3900/- ನಲ್ಲಿ ನಿಮ್ಮ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿ ಮತ್ತು ಯಶಸ್ಸು ಪಡೆಯಿರಿ.
ನಿಮ್ಮ ಯಶಸ್ಸು ನಮ್ಮ ಬದ್ಧತೆಯಾಗಿದೆ.
ಈ ಅವಕಾಶ 5 ಜನರಿಗೆ ಮಾತ್ರ.
98445 52867

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಮೆಡಿಕಲ್ ಶಾಪ್ ಮಾರಾಟಕ್ಕಿದೆ
ರ್‍ಯಾಕ್ಸ್, ಕೌಂಟರ್ ಟೇಬಲ್ ಸಮೇತ ಮಾರಾಟಕ್ಕಿದೆ.
84313 57744
98443 79910

ಶಾಕಿರಾ ಬ್ಯೂಟಿ ಪಾರ್ಲರ್
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ - 1
ಸಹಾಯಕರು (Helpers) - 2
ಸಂಪರ್ಕಿಸಿ : #741/4, 10th main, P.J. Extension, Davanagere.
93420 19013

ಅಧಿಕೃತ ಚೀಟಿ ಸಂಸ್ಥೆ
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

ಮನೆ ಬಾಡಿಗೆಗೆ ಇದೆ
#3428/M126,'ಬಸವ ಶ್ರೀ ನಿಲಯ', ಬಸವೇಶ್ವರ ಮುಖ್ಯ ರಸ್ತೆ, ದಾವಣಗೆರೆ ಇಲ್ಲಿ 2 ಬೆಡ್ ರೂಮ್ ವುಳ್ಳ ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
97312 76324
94494 22489

# ದೇಶ ಒಡೆ, ಅಭಿವೃದ್ಧಿಗೆ ತಡೆ : ಮೋದಿ ಕಿಡಿ



**(3ನೇ ಪುಟದಿಂದ)** ಪುರುಸೊತ್ತಿಲ್ಲ. ಗುಂಪುಗಾರಿಕೆ, ವಂಶಾಡಳಿತ ಹಾಗೂ ತಪ್ಪು ನೀತಿಗಳ ಮೂಲಕ ಕರ್ನಾಟಕದ ಕಾಂಗ್ರೆಸ್ ರಾಜ್ಯದ ಜನರ ಭವಿಷ್ಯದ ಜೊತೆ ಚೆಲ್ಲಾಟ ಆಡುತ್ತಿದೆ ಎಂದು ಟೀಕಿಸಿದರು.

ಕರ್ನಾಟಕದ ವಿಜ್ಞಾನಿ ಕೆ. ಕಸ್ತೂರಿ ರಂಗನ್ ನೇತೃತ್ವದಲ್ಲಿ 20 ಲಕ್ಷಕ್ಕೂ ಹೆಚ್ಚು ಜನರು ಸಮಾಲೋಚನೆ ನಡೆಸಿ ನೂತನ ಶಿಕ್ಷಣ ನೀತಿ ರೂಪಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ವೋಟ್ ಬ್ಯಾಂಕ್ ರಾಜಕೀಯ ಖುಷಿ ಪಡಿಸಲು ಅದನ್ನೂ ರದ್ದು ಮಾಡಿದೆ. ಆ ಮೂಲಕ ಯುವ ಪೀಳಿಗೆಗೆ ಹೆಚ್ಚು ನಷ್ಟವಾಗಿದೆ. ರಾಜಕೀಯಕ್ಕಾಗಿ ಜನತೆಯ ಭವಿಷ್ಯ ಹಾಳುವ ಮಾಡುವ ಅಧಿಕಾರ ಯಾರಿಗೂ ಇಲ್ಲ ಎಂದೂ ಮೋದಿ ಹೇಳಿದರು.

ದಶಕಗಳಿಂದ ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರ ಹಾಗೂ ಹಗರಣಗಳ ಹಾದಿಯಲ್ಲಿ ನಡೆದಿದೆ. ಕೇಂದ್ರ ಸರ್ಕಾರದಿಂದ 1 ರೂ. ಕಳಿಸಿದರೆ, ಬಡವರಿಗೆ 15 ಪೈಸೆ ತಲುಪುತ್ತದೆ ಎಂದು ಕಾಂಗ್ರೆಸ್‌ನ ಆಗಿನ ಪ್ರಧಾನ ಮಂತ್ರಿ ಹೇಳಿದ್ದರು.

ಬಡವರ 85 ಪೈಸೆ ಕಸಿಯುತ್ತಿದ್ದ 'ಕೈ' ಯಾವುದು? ಎಂದು ಮೋದಿ ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ಕಿಡಿ ಕಾರಿದರು.

10 ಕೋಟಿ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ, ಅವರ ಹೆಸರಿನಲ್ಲಿ ಹಣ ಕಬಳಿಸಲಾಗುತ್ತಿತ್ತು. ಈ ಹಣ ಕಾಂಗ್ರೆಸ್ ವ್ಯವಸ್ಥೆಗೆ ಸೇರ್ಪಡೆಯಾಗುತ್ತಿತ್ತು. ಇಂತಹ ನಕಲಿಗಳ ಸಂಖ್ಯೆ ಕರ್ನಾಟಕದ ಜನಸಂಖ್ಯೆಗಿಂತಲೂ ಹೆಚ್ಚಾಗಿತ್ತು.

ಆಧಾರ್ ಹಾಗೂ ಡಿ.ಬಿ.ಟಿ. ಜೋಡಣೆಯಿಂದಾಗಿ ಬಡವರಿಗೆ ಹಕ್ಕು ನೀಡಲಾಗಿದೆ. ಈಗ ಮೋದಿ ಕಳಿಸುವ ಪ್ರತಿ ರೂಪಾಯಿಯೂ ಬಡವರಿಗೆ ತಲುಪುತ್ತದೆ ಎಂದರು.

2014ಕ್ಕೆ ಮುಂಚೆ ಕರ್ನಾಟಕದಲ್ಲಿ ಕೇವಲ 15 ರಾಷ್ಟ್ರೀಯ ಹೆದ್ದಾರಿಗಳಿದ್ದವು. ಈಗ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ 47ಕ್ಕೆ ತಲುಪಿದೆ. ದಾವಣಗೆರೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಜಾರಿಗೆ ಬಂದಿದೆ. ಹರಿಹರ ರೈಲ್ವೆ ನಿಲ್ದಾಣ ಉನ್ನತೀಕರಣವಾಗುತ್ತಿದೆ, ತುಮಕೂರು - ದಾವಣಗೆರೆ ನೇರ ಸಂಪರ್ಕ ಯೋಜನೆ ಜಾರಿಗೆ ಬರುತ್ತಿದೆ. ಎಸ್.ಟಿ.ಪಿ.ಐ. ಉಪ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದವರು ಹೇಳಿದರು.

ವೇದಿಕೆಯ ಮೇಲೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಗೋವಿಂದ ಕಾರಜೋಳ, ಸಂಸದ ಜಿ.ಎಂ. ಸಿದ್ದೇಶ್ವರ, ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಸಂಸದೆ ಸುಮಲತ ಅಂಬರೀಷ್, ಪರಿಷತ್ ಸದಸ್ಯ ನವೀನ್, ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾ ಚಾರ್ಯ, ಕರುಣಾಕರ ರೆಡ್ಡಿ, ಬಿ.ಸಿ. ಪಾಟೀಲ್, ಹರಿಹರ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಹೆಚ್.ಪಿ. ರಾಜೇಶ್, ಬಸವರಾಜ ನಾಯ್ಕ, ಉಪ ಮೇಯರ್ ಯಶೋದ ಎಗ್ಗಪ್ಪ, ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮುಖಂಡರಾದ ಅರುಣ್ ಕುಮಾರ್ ಪೂಜಾರ್, ರಾಜು ಕುರುಡಗಿ, ಮಾಡಾಳ್ ಮಲ್ಲಿಕಾರ್ಜುನ್, ನಾಗರಾಜ್ ಲೋಕಿಕೆರೆ, ಬಿ.ಜಿ. ಅಜಯ್ ಕುಮಾರ್, ಆನಂದಪ್ಪ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳ್, ಡಾ. ಬಸವರಾಜ್ ಕೇಲಗಾರ್, ವೀರೇಶ್ ಹನಗವಾಡಿ, ಬಿ.ಎಸ್. ಜಗದೀಶ್, ಅನಿಲ್ ಮೆಣಸಿನಕಾಯಿ ಇತರರು ಉಪಸ್ಥಿತರಿದ್ದರು.

## ತಗ್ಗದೇ, ಜಗ್ಗದೇ, ನಿಲ್ಲದೇ ಮುನ್ನಡೆಯುವೆ

2024ರ ಈ ರೀತಿಯ ಉತ್ಸಾಹದ ಬೆಂಬಲ ಹಿಂದೆಂದೂ ನೋಡಿರಲಿಲ್ಲ. ಈ ಬಾರಿ ದೇಶದಲ್ಲಿ 2014 ಹಾಗೂ 2019ರಲ್ಲಿ ಕಂಡರಿಯದಂತಹ ವಾತಾವರಣ ಉಂಟಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ದೇಶದ ಜನತೆ ನನ್ನ ಕೆಲಸವನ್ನು ಅಳೆದೂ ತೂಗಿ ನೋಡಿದ್ದಾರೆ. ನನ್ನನ್ನು ಒರೆಗೆ ಹಚ್ಚಿದ್ದಾರೆ. ಈಗ ತಾಯಂದಿರು ಹಾಗೂ ಸಹೋದರಿಯರು ನನಗೆ ಅಭೇದ್ಯ ರಕ್ಷಾ ಕವಚವಾಗಿದ್ದಾರೆ ಎಂದವರು ಹೇಳಿದರು.

ರಾಜಕಾರಣಕ್ಕೆ ಕಾಂಗ್ರೆಸ್‌ನಿಂದಾಗಿ ಕೆಟ್ಟ ಹೆಸರು ಬಂದಿದೆ. ಇಂತಹ ಕ್ಷೇತ್ರದಲ್ಲೂ ನನಗೆ ಜನರಿಂದ ಈ ರೀತಿಯ ಆಶೀರ್ವಾದ ಸಿಗುತ್ತಿರುವುದು ಪೂರ್ವ ಜನ್ಮಗಳ ಪುಣ್ಯ ಎಂದು ಮೋದಿ ಹೇಳಿದರು.

ಇಂತಹ ಆಶೀರ್ವಾದಕ್ಕೆ ನಾನು ಮಾತುಗಳಿಂದ ಉತ್ತರ ಹೇಳಲು ಸಾಧ್ಯವಾಗದು. ಮೌನ ಸಮರ್ಪಣೆ ಹಾಗೂ ತಲೆ ತಗ್ಗಿಸಿ ಪ್ರಣಾಮ ಮಾಡಬೇಕು ಎಂದು ಕೈ ಮುಗಿದು ಹೇಳಿದರು.

ನಾ ಥಕೂಂಗ, ನಾ ರುಕೂಂಗ, ನಾ ಝುಕೂಂಗ (ತಗ್ಗದೇ, ಜಗ್ಗದೇ, ನಿಲ್ಲದೇ ಮುನ್ನಡೆಯುತ್ತೇನೆ). ಪ್ರತಿ ಕ್ಷಣವೂ ಜನತೆಗಾಗಿ ಹೋರಾಟ ನಡೆಸುತ್ತೇನೆ. ಇದೇ ನನ್ನ ಗ್ಯಾರಂಟಿ ಎಂದವರು ಹೇಳಿದರು.

## ಕಾಂಗ್ರೆಸ್‌ಗೆ ಒಂದು ಸ್ಥಾನವಾದರೂ ಸಿಗಲಿ ಎಂಬ ಚಿಂತೆ

ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಕಾಂಗ್ರೆಸ್ ಖಾತೆ ತೆರೆಯುವ ಸಾಧ್ಯತೆ ಮುಗಿದಿದೆ. ಏನಾದರೂ ಆಗಿ ಒಂದು ಸ್ಥಾನವಾದರೂ ಸಿಗಲಿ ಎಂಬ ಚಿಂತೆ ಕಾಂಗ್ರೆಸ್‌ನದ್ದಾಗಿದೆ.

ಈ ಬಾರಿಯ ಚುನಾವಣೆ ನಂತರ ಕಾಂಗ್ರೆಸ್‌ನ ಅಂತರ್‌ಕಲಹ ಬೀದಿಗೆ ಬರಲಿದೆ. ಈ ಹಿಂದೆ ಸೋತಾಗಲೆಲ್ಲ ಮತ ಯಂತ್ರದ ನೆಪ ಹೇಳುತ್ತಿದ್ದರು. ಮತ ಯಂತ್ರದ ಕಾರಣದಿಂದ ಸೋತೆವು, ಠೇವಣಿ ಕಳೆದುಕೊಳ್ಳುತ್ತಿದ್ದೆವು ಎನ್ನುತ್ತಿದ್ದರು. ಚುನಾವಣೆ ಬಂದಾಗಲೆಲ್ಲ ಮತ ಯಂತ್ರದ ಜಪಮಾಲೆ ಮಾಡುತ್ತಿದ್ದರು. ಆದರೆ, ಈಗ ಸುಪ್ರೀಂ ಕೋರ್ಟ್ ಎಂತಹ ಕಪಾಳ ಮೋಕ್ಷ ಮಾಡಿದರೆ ಎಂದರೆ, ಮತ ಯಂತ್ರದ ನೆಪ ಹೇಳಲಾಗದು. ಸೋಲಿಗೆ ಯಾವ ನೆಪ ಹೇಳಬೇಕು ಎಂಬ ಚಿಂತೆಯಲ್ಲಿ ತೊಡಗಿದೆ.

ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದಾಗ ಮೊದಲು ಗ್ಯಾಸ್ ಸಿಲಿಂಡರ್‌ನಿಂದ ಸಂಭವಿಸಿದ್ದು ಎಂದು ಕಾಂಗ್ರೆಸ್‌ನವರು ಹೇಳುತ್ತಾರೆ. ನಂತರ ಉದ್ಯಮದ ದ್ವೇಷ ಎಂದರು. ಹುಬ್ಬಳ್ಳಿಯಲ್ಲಿ ಹಾಡು ಹಗಲೇ ಕಾಲೇಜು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿನಿ ಹತ್ಯೆ ಆಗಿದೆ. ಇದರಲ್ಲೂ ಕಾಂಗ್ರೆಸ್‌ನವರು ವೋಟ್ ಬ್ಯಾಂಕ್ ಹುಡುಕುತ್ತಿದ್ದಾರೆ. ನಾವು ಪಿ.ಎಫ್.ಐ. ನಿಷೇಧ ಮಾಡಿ, ಅದರ 'ತೀಸ್ ಮಾರ್ ಖಾನ್'ಗಳನ್ನು (ಪ್ರಮುಖರನ್ನು) ಜೈಲಿಗೆ ಹಾಕಿದ್ದೇವೆ. ಕಾಂಗ್ರೆಸ್‌ನವರು ಅದೇ ಸಂಘಟನೆಯವರ ಜೊತೆ ಕೈ ಜೋಡಿಸಿದ್ದಾರೆ. ಸುರಕ್ಷತೆಯ ಗ್ಯಾರಂಟಿ ಎಂದರೆ ಮೋದಿ. ಕಳೆದ ಹತ್ತು ವರ್ಷಗಳಿಂದ ನೋಡಿದ್ದೀರಿ. 'ಘರ್ ಮೇ ಘುಸ್ ಕೆ ಮಾರ್ತೇ ಹೈ'. (ಶತ್ರುಗಳ ನೆಲೆಗೆ ನುಗ್ಗಿ ದಾಳಿ ನಡೆಸುತ್ತೇವೆ). ನನಗೆ ದೇಶದ ಸುರಕ್ಷತೆಯೇ ಅತಿ ದೊಡ್ಡ ಆದ್ಯತೆ.

## ಬಿಜೆಪಿ ಮುಖಂಡರ ಅಭಿಮತ

ಕಾಂಗ್ರೆಸ್ ಸರ್ಕಾರದಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗಿದೆ. ನಮ್ಮ ಹೆಣ್ಣು ಮಕ್ಕಳ ರಕ್ಷಣೆಯಾಗಬೇಕಾದರೆ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನ ಮಂತ್ರಿ ಆಗಬೇಕು.

**- ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ**

ದೆಹಲಿಯಲ್ಲಿ ನರೇಂದ್ರ ಮೋದಿ ಪ್ರಧಾನಿಯಾಗಬೇಕು. ದಾವಣಗೆರೆಯಿಂದ ಗಾಯತ್ರಿ ಸಿದ್ದೇಶ್ವರ ಸಂಸದೆಯಾಗಬೇಕು. ಅಡುಗೆ ಮಾಡಲೂ ಸೈ, ಆಡಳಿತಕ್ಕೂ ಸೈ ಎಂಬ ರೀತಿಯಲ್ಲಿ ಗಾಯತ್ರಿ ಸಿದ್ದೇಶ್ವರ ಅವರಿದ್ದಾರೆ.

**- ಎಸ್.ವಿ. ರಾಮಚಂದ್ರ, ಮಾಜಿ ಶಾಸಕ**

1,300 ಕೋಟಿ ರೂ. ಹಣ ಭದ್ರಾ ನಾಲೆ ಆಧುನೀಕರಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಬಿಡುಗಡೆ ಮಾಡಲಾಗಿತ್ತು. ಇದರಿಂದಾಗಿ ಕೊನೆ ಭಾಗದವರೆಗೆ ನೀರು ಬಂದಿತ್ತು. ಈಗ ಕೊನೆ ಭಾಗಕ್ಕೆ ನೀರು ತಲುಪುತ್ತಿಲ್ಲ.

**- ಬಿ.ಪಿ. ಹರೀಶ್, ಶಾಸಕ**

ಸಿದ್ದರಾಮಯ್ಯ ಸರ್ಕಾರಕ್ಕೆ ವರ್ಷವಾದರೂ ಅಭಿವೃದ್ಧಿ ಕೆಲಸ ಮಾಡಿಲ್ಲ. ಉದ್ಯೋಗ ಕೊಟ್ಟಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಮಾಡದೇ ಸರ್ಕಾರ ನಿಷ್ಕ್ರಿಯವಾಗಿದೆ. ಗ್ಯಾರಂಟಿ ಹೆಸರಿನಲ್ಲಿ ಸರ್ಕಾರದ ಖಜಾನೆ ಖಾಲಿ ಮಾಡಿ ದಿವಾಳಿಯಾಗಿದೆ. ಕಾಂಗ್ರೆಸ್ ದುರಾಡಳಿತದಿಂದ ಪಕ್ಷ ನಶಿಸಿ ಹೋಗುತ್ತಿದೆ. ಶಾಸಕರು ಹಾಗೂ ಸಚಿವರ ನಡುವೆ ಭ್ರಷ್ಟಾಚಾರದ ಪೈಪೋಟಿ ನಡೆದಿದೆ.

**- ಗೋವಿಂದ ಕಾರಜೋಳ, ಮಾಜಿ ಸಚಿವ**

ಮುಂದಿನ ದಿನಗಳಲ್ಲಿ ನದಿಗಳ ಜೋಡಣೆ ಜಾರಿಗೆ ಬರಬೇಕಿದೆ. ನರೇಂದ್ರ ಮೋದಿ ಮತ್ತೆ ಪ್ರಧಾನಿಯಾದರೆ ಈ ದಿಸೆಯಲ್ಲಿ ಕ್ರಮವಾಗುವ ವಿಶ್ವಾಸ ಇದೆ.

**- ಮಾಡಾಳ್ ವಿರೂಪಾಕ್ಷಪ್ಪ, ಮಾಜಿ ಶಾಸಕ**

ಸುಭದ್ರತೆ, ಸುರಕ್ಷತೆ, ಕಾನೂನು ಸುವ್ಯವಸ್ಥೆ ಹಾಗೂ ರೈತರ ನೆಮ್ಮದಿಗಾಗಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಬೇಕು. ಆರ್ಥಿಕತೆಯಲ್ಲಿ ಭಾರತ ಮೊದಲ ಸ್ಥಾನಕ್ಕೆ ಬರಲು ಮೋದಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕಿದೆ.

**- ಕರುಣಾಕರ ರೆಡ್ಡಿ, ಮಾಜಿ ಸಚಿವ**

28 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ವಾತಾವರಣ ರೂಪುಗೊಂಡಿದೆ. ನರೇಂದ್ರ ಮೋದಿ ದೇಶಕ್ಕೆ ಅನಿವಾರ್ಯ. ಭವಿಷ್ಯದ ಭಾರತದ ನಿರ್ಮಾಣಕ್ಕೆ ಅವರು ಮತ್ತೆ ಪ್ರಧಾನಿಯಾಗಬೇಕು. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳಿಗೆ ವಾರಂಟಿ ಇಲ್ಲ. ಲೋಕಸಭಾ ಚುನಾವಣೆ ನಂತರ ಬಹುಶಃ ಎಲ್ಲ ಗ್ಯಾರಂಟಿಗಳು ನಿಲ್ಲಲಿವೆ.

**-ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕ**

ಕಾಂಗ್ರೆಸ್‌ನವರು ಹತ್ತು ವರ್ಷಗಳಲ್ಲಿ ರೈತರ 72 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದ್ದಾರೆ. ಆದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೈತರು ಸಾಲಕ್ಕೆ ಸಿಲುಕಬಾರದು ಎಂದು ಐದೂವರೆ ವರ್ಷಗಳಲ್ಲಿ 2.72 ಲಕ್ಷ ಕೋಟಿ ರೂ.ಗಳನ್ನು ಅವರ ಖಾತೆಗೆ ಜಮಾ ಮಾಡಿದ್ದಾರೆ.

**- ಬಿ.ಸಿ. ಪಾಟೀಲ್, ಮಾಜಿ ಸಚಿವ**

ದಾವಣಗೆರೆ ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಲ್ಲಿ 13 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಕೆಲಸ ಆಗಿದೆ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನ ಮಂತ್ರಿಯಾಗಲು ಬಿಜೆಪಿ ಅಭ್ಯರ್ಥಿಗಳನ್ನು ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕು.

**- ಜಿ.ಎಂ. ಸಿದ್ದೇಶ್ವರ, ಸಂಸದ**

ತಾತ್ಕಾಲಿಕ ಗ್ಯಾರಂಟಿ ಹಿಂದೆ ಹೋದರೆ ಶಾಶ್ವತ ನಷ್ಟವಾಗಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ 2047ರ ವೇಳೆಗೆ ಭಾರತವನ್ನು ಮೊದಲ ಸ್ಥಾನಕ್ಕೆ ತರುವ ಗುರಿ ಹೊಂದಿದ್ದಾರೆ. ಉತ್ತಮ ಭವಿಷ್ಯ, ಸ್ವಾಭಿಮಾನದ ಬದುಕಿಗಾಗಿ ಮೋದಿ ಮತ್ತೆ ಪ್ರಧಾನಿಯಾಗಬೇಕು.

**- ಸುಮಲತ ಅಂಬರೀಶ್, ಸಂಸದೆ**

## ಮೋದಿ ಘೋಷಣೆಗೆ ಮಾತು ನಿಲ್ಲಿಸಿದ ಬಸವರಾಜ ಬೊಮ್ಮಾಯಿ

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾತು ಆರಂಭಿಸಿದಾಗ ಜನರು 'ಮೋದಿ ... ಮೋದಿ...' ಘೋಷಣೆ ಮೊಳಗಿಸಿದರು.

ಘೋಷಣೆಗಳ ಅಬ್ಬರದಿಂದಾಗಿ ಬೊಮ್ಮಾಯಿ ಕೆಲ ಕ್ಷಣ ಮಾತು ನಿಲ್ಲಿಸಿದರು.

ನಂತರ ಮುಂದುವರೆದ ಬೊಮ್ಮಾಯಿ, ದೇಶದ 140 ಕೋಟಿ ಜನರ ಮನಸ್ಸಿನಲ್ಲಿರುವುದು ಮೋದಿ. ಅವರು ಅಸಾಧ್ಯ ಎನಿಸಿದ್ದನ್ನು ಜಾರಿ ಮಾಡಿ ತೋರಿಸಿದ್ದಾರೆ. ಹೀಗಾಗಿ ಮೋದಿ ಪರ ಜಯಘೋಷ ಮೊಳಗುತ್ತಿದೆ ಎಂದರು.

ಯುಪಿಎ ಅವಧಿಯಲ್ಲಿ ಭಯೋತ್ಪಾದನೆ ನಿವಾರಣೆ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇತ್ತು. ಅಂತಹ ಭಯೋತ್ಪಾದಕರಿಗೇ ಭಯ ಹುಟ್ಟಿಸಿದ ನಾಯಕ ಮೋದಿ. ಭಯೋತ್ಪಾದಕರ ನೆಲೆಗೆ ನುಗ್ಗಿ ಭಯೋತ್ಪಾದನೆ ನಿರ್ಮೂಲನೆ ಮಾಡಿದ್ದಾರೆ ಎಂದರು. ಬಡತನ ನಿರ್ಮೂಲನೆ ಅಸಾಧ್ಯ ಎನ್ನಲಾಗುತ್ತಿತ್ತು. ಆದರೆ, ಕಳೆದ ಹತ್ತು ವರ್ಷಗಳಲ್ಲಿ 25 ಕೋಟಿ ಜನರನ್ನು ಮೋದಿ ಸರ್ಕಾರ ಬಡತನದಿಂದ ಮೇಲೆತ್ತಿದೆ ಎಂದರು.

ಮನೆ ಮನೆಗೆ ನಲ್ಲಿಗಳ ಮೂಲಕ ನೀರು ತಲುಪಿಸುವ ಕೆಲಸದ ಬಗ್ಗೆ ಯಾರೂ ಮಾತೂ ಸಹ ಆಡಿರಲಿಲ್ಲ. ಈಗ ಜಲ ಜೀವನ್ ಯೋಜನೆಯಡಿ 75 ಕೋಟಿಗೂ ಹೆಚ್ಚು ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

## ನಾರಿ ಶಕ್ತಿಗಾಗಿ ಮೋದಿ ಶ್ರಮ

**(3ನೇ ಪುಟದಿಂದ)** ಬಿಜೆಪಿಗೆ ನೀಡಬೇಕಿದೆ. ಮಹಿಳೆಯರು ಅಡುಗೆ ಮಾಡಲೂ ಸೈ, ಆಡಳಿತಕ್ಕೂ ಸೈ ಎಂಬುದನ್ನು ಸಾಬೀತು ಪಡಿಸಲಿದ್ದೇವೆ ಎಂದು ಗಾಯತ್ರಿ ತಿಳಿಸಿದರು. ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಕೆಲವೇ ದಿನಗಳ ಹಿಂದೆ ವಿದ್ಯಾರ್ಥಿನಿ ನೇಹಾ ಹತ್ಯೆ ಮಾಡಲಾಗಿದೆ. ನಲ್ಲೂರಿನಲ್ಲೂ ಇಬ್ಬರು ಯುವಕರಿಗೆ ಚೂರಿ ಇರಿತವಾಗಿದೆ. ಗಂಗಾವತಿಯಲ್ಲಿ ಜೈ ಶ್ರೀರಾಮ್ ಘೋಷಣೆ ಮಾಡಿದವರಿಗೆ ಹಲ್ಲೆ ಮಾಡಲಾಗಿದೆ. ರಾಜ್ಯದ ಜನರ ರಕ್ಷಣೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದವರು ಟೀಕಿಸಿದರು.

# ಸರ್ವಾಧಿಕಾರಿ ಪ್ರವೃತ್ತಿಯ ಬಿಜೆಪಿ ಸೋಲಿಸಿ

**(3ನೇ ಪುಟದಿಂದ)** ಮೈನಾರಿಟಿ, ಬಡವರು ಹಾಗೂ ದೇಶದ ರೈತರ ಮೇಲೆ ಬಿಜೆಪಿಗೆ ಕಾಳಜಿ ಇಲ್ಲ. ಈ ಸಂಗತಿಯನ್ನು ಎಲ್ಲರೂ ತಿಳಿದು ಕಾಂಗ್ರೆಸ್‌ಗೆ ಮತ ಹಾಕಬೇಕು ಎಂದು ಹೇಳಿದರು.

ಶಾಮನೂರು ಕುಟುಂಬವು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಅನುದಾನ ತಂದು ಜಿಲ್ಲೆಯ ಸಮಗ್ರ ಅಭಿವೃದ್ಧಿ ಮಾಡುವ ಗುರಿ ಇಟ್ಟುಕೊಂಡಿದ್ದು, ಈ ಜಿಲ್ಲೆಯ ಬದಲಾವಣೆಗೆ ಡಾ. ಪ್ರಭಾ ಅವರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ನಮ್ಮ ಸರ್ಕಾರ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಗೆದ್ದರೆ ಮಹಿಳೆಯರಿಗೆ 1ಲಕ್ಷ ರೂ. ಕೊಡಲಿದೆ ಎಂದು ಹೇಳಿದರು.

ಜನರ ಸಮಸ್ಯೆಗೆ ಜವಾಬ್ದಾರಿಯುತವಾಗಿ ಸ್ಪಂದಿಸುವವನೇ ನಿಜವಾದ ನಾಯಕ. ಈ ನಿಟ್ಟಿನಲ್ಲಿ ನಾನೂ ಸಹ ನಿಮ್ಮ ಎಲ್ಲ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದು ಭರವಸೆ ನೀಡಿದರು.

ನಮ್ಮ ಜಿಲ್ಲೆಗೆ ವಿಮಾನ ನಿಲ್ದಾಣ, ಐಟಿ-ಬಿಟಿ ಕಂಪನಿಗಳ ಅವಶ್ಯಕತೆಯಿದ್ದು, ಇಂತಹ ಯೋಜನೆಗಳನ್ನು ಜಿಲ್ಲೆಗೆ ತಂದು ಇಲ್ಲಿನ ಸಮಗ್ರ ಅಭಿವೃದ್ಧಿ ಮಾಡುತ್ತೇನೆ ಎಂದು ಹೇಳಿದರು.

ವರಿಷ್ಠರು ರಾಜ್ಯದಲ್ಲಿ 18-20 ಸ್ಥಾನ ಗಳಿಸುತ್ತೇವೆ ಎಂದಿದ್ದರು. ಆ ಪಟ್ಟಿಯಲ್ಲಿ ನನ್ನ ಹೆಸರು ಇರುವಂತೆ ಮತದಾರರು ಆಶೀರ್ವಾದ ಮಾಡಿ ಎಂದು ಮನವಿ ಮಾಡಿಕೊಂಡರು. ಡಾ.ಎ.ಬಿ. ರಾಮಚಂದ್ರಪ್ಪ ಪ್ರಾಸ್ತಾವಿಕ ಮಾತನಾಡಿದರು.

ಮುಖಂಡರಾದ ಎಸ್.ಆರ್. ಶೇಖರಪ್ಪ, ರಮೇಶ್ ಹೊದಿಗೆರೆ, ಎಸ್ಸಿ ಘಟಕದ ಕೆ.ಪಿ. ಪಾಲಯ್ಯ, ಹದಡಿ ಹಾಲಪ್ಪ, ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಬಿ. ವೀರಣ್ಣ, ಎಸ್ಸಿ ಸಮಾಜದ ಮುಖಂಡರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕಾಂಗ್ರೆಸ್ ಅಭ್ಯರ್ಥಿಗೆ ರೈತ ಸಂಘದಿಂದ ಬೆಂಬಲ

**(3ನೇ ಪುಟದಿಂದ)** ಪರಿಣಿತರಾಗಿರುವ ಅವರಿಗೆ ರೈತರ ಪ್ರತಿಯೊಂದು ವಿಚಾರಗಳಲ್ಲಿ ಅಪಾರವಾದ ಕಾಳಜಿ ಇದೆ. ನನ್ನಜ್ಜ ಹಾಗೂ ನಮ್ಮ ತಂದೆಯವರಿಗಿಂತ ಹೆಚ್ಚಿನ ರೀತಿಯಲ್ಲಿ ಸಮಸ್ಯೆಗಳನ್ನು ಫಾಲೋಅಪ್ ಮಾಡಿ ಸರಿಪಡಿಸುವರು ಎಂದರು.

ರೈತರ ಪ್ರತಿ ಹೋರಾಟದಲ್ಲಿ ನಾವುಗಳು ನಿಮ್ಮ ಜತೆ ಇರುತ್ತೇವೆ ಎಂದ ಅವರು ಮೇ 4 ರಂದು ಜಿಲ್ಲೆಗೆ ಪ್ರಿಯಾಂಕಾಗಾಂಧಿ ಚುನಾವಣಾ ಪ್ರಚಾರಕ್ಕೆ ಬರುತ್ತಿದ್ದಾರೆ. ತಾವುಗಳೆಲ್ಲ ಕುಟುಂಬ ಸಮೇತರಾಗಿ ಹಸ್ತದ ಗುರ್ತಿಗೆ ಮತ ನೀಡಿ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಜಿಲ್ಲಾ ಕಾರ್ಯದರ್ಶಿ ಚಿನ್ನಸಮುದ್ರ ಶೇಖರನಾಯ್ಕ್, ಜಿಲ್ಲಾ ಸಂಚಾಲಕ ಟಿ.ಆರ್ ಗಿರಿಯಾಪುರ ಲಕ್ಷ್ಮಣ, ಚನ್ನಗಿರಿ ತಾಲ್ಲೂಕು ಅಧ್ಯಕ್ಷ ಯಲೋದಹಳ್ಳಿ ಕಾಳೇಶ್, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕು ಅಧ್ಯಕ್ಷ ಮಾಸಡಿ ಭರಮಪ್ಪ, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಮಂಡಲೂರು ವಿಶ್ವನಾಥ್, ಜಿಲ್ಲೆಯ ವಿವಿಧ ಭಾಗಗಳ ಮುಖಂಡರಾದ ಕರೆಕಟ್ಟೆ ಕಲಿಂವುಲ್ಲಾ, ಬೆಡಗನೂರು ಚಿದಾನಂದಪ್ಪ, ನಿರಂಜನಗೌಡ, ರಾಜು ಕಂಬಳಿ, ಬೊಮ್ಮನಹಳ್ಳಿ ಬಂಕೆ ಜಯಣ್ಣ, ದಾಗಿನಕಟ್ಟೆಯ ಶಾಂತರಾಜ್, ಸುರೇಶ್, ಹರಳೀಪುರ ಧರ್ಮಾಗೌಡರು, ಮಲ್ಲಶೆಟ್ಟಿಹಳ್ಳಿ ಕರಿಬಸಪ್ಪ, ಆಂಜನೇಯ ಮಿಲ್ ಶ್ರೀನಿವಾಸ್, ಯಲೋದಹಳ್ಳಿ ಶಶಿಕುಮಾರ್, ಕಣಿವೆ ಬಿಳಚಿ ಅಣ್ಣಪ್ಪ, ಕಂಚಿಗನಾಳ್ ಮನು, ಬೆಡ್ ಕಡೂರು ರವಿ, ಹೊದಿಗೆರೆ ರವಿ ಸೇರಿದಂತೆ ಇನ್ನು ಹಲವಾರು ರೈತರು ಈ ವೇಳೆ ಉಪಸ್ಥಿತರಿದ್ದರು.

# ಶಿಕ್ಷಣದ ಸುಧಾರಣೆಗೆ ನನ್ನ ಮೊದಲ ಆದ್ಯತೆ

**(3ನೇ ಪುಟದಿಂದ)** ಇಟ್ಟುಕೊಂಡು ಕೆಲಸ ಮಾಡಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಮತ ಹಾಕಿಯೇ ಹಾಕುತ್ತೇವೆ ಎಂಬುದು ಗೊತ್ತು. ಚುನಾವಣೆ ಬಂದಾಗ ಹಬ್ಬದ ರೀತಿ ಮಾಡುತ್ತಾರೆ. ಯೋಗ್ಯವಲ್ಲದ ವ್ಯಕ್ತಿಗಳು ಟಿಕೆಟ್ ತೆಗೆದುಕೊಂಡು ಬಂದು ಪಕ್ಷದ ತತ್ವ, ಸಿದ್ಧಾಂತಗಳ ಬಗ್ಗೆ ಮಾತನಾಡುತ್ತಾರೆ.

ಮೂರು ದಶಕಗಳಿಂದ ಜನರನ್ನು ಶೋಷಿಸುತ್ತಿದ್ದಾರೆ. ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ಸಿಗದಿದ್ದರೆ ಭವಿಷ್ಯ ರೂಪಿಸಿಕೊಳ್ಳುವುದು ಕಷ್ಟ. ಹಳ್ಳಿ ಮತ್ತು ನಗರ ಪ್ರದೇಶಗಳ ಜನರಿಗೂ ಒಳ್ಳೆಯ ಶಿಕ್ಷಣ ಸಿಗಬೇಕು. ಶ್ರೀಮಂತರ ಮಕ್ಕಳು ಡಾಕ್ಟರ್, ಎಂಜಿನಿಯರ್ ಸೇರಿದಂತೆ ಒಳ್ಳೆಯ ಕೆಲಸಕ್ಕೆ ಸೇರುತ್ತಾರೆ.

ಬಡವರ ಮಕ್ಕಳು ಕೂಲಿ, ಆಟೋ ಡ್ರೈವರ್ ಸೇರಿದಂತೆ ಇತರೆ ಕೆಲಸ ಮಾಡಿಕೊಂಡು ಬದುಕಬೇಕಾಗುತ್ತದೆ. ಇಲ್ಲಿ ಬಡತನ ಎನ್ನೋದು ಮುಂದುವರೆಯುತ್ತಿದೆ. ಶಾಸಕರು, ಸಂಸದರು ಶಿಕ್ಷಣದ ಬಗ್ಗೆ ಕಾಳಜಿ ವಹಿಸಿಲ್ಲ ಎಂದರು.

ಈ ಬಾರಿ ಯುವ ನಾಯಕನನ್ನು ಬೆಳೆಸಬೇಕು ಎಂಬ ತೀರ್ಮಾನ ಮಾಡಿರುವ ಜನರ ನಿರ್ಧಾರಕ್ಕೆ ಚಿರಋಣಿಯಾಗಿರುತ್ತೇನೆ ಎಂದರು.

# ಅಣಜಿ - ಗೊಲ್ಲರಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರ್ಪಡೆ



ದಾವಣಗೆರೆ, ಏ. 28 - ಮಾಯಕೊಂಡ ವಿಧಾನಸಭಾ ವ್ಯಾಪ್ತಿಯ ಅಣಜಿ - ಗೊಲ್ಲರಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಿದ್ದೇಶ್, ರಂಗನಾಥ್.ಜಿ.ಆರ್, ರಂಗಪ್ಪ, ಹನುಮಂತ ಎಂ. ಬಿ, ರಂಗಸ್ವಾಮಿ, ಕೃಷ್ಣ, ಹಾಲೇಶ್.ಎಸ್, ಅಣ್ಣೇಶ್, ಮಂಜುನಾಥ್, ಆದರ್ಶ್, ಹನಮಂತ ಪಿ, ಅಂಜಿನಪ್ಪ, ಬುಳ್ಳಪ್ಪ, ಮಂಜುನಾಥ್.ಹೆಚ್, ನಾಗರಾಜಪ್ಪ, ಹನುಮಂತಪ್ಪ ಬಿ, ಕೊಟ್ರಪ್ಪ, ಮಂಜುನಾಥ.ಪಿ, ಪ್ರಸನ್ನ, ರಮೇಶ್ ಮತ್ತಿತರರು ಸಂಸದ ಜಿ.ಎಂ.ಸಿದ್ದೇಶ್ವರ, ಕೆ.ಎಸ್. ನವೀನ್, ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ಮಂಡಲ ಅಧ್ಯಕ್ಷ ದೇವೇಂದ್ರಪ್ಪ ಅವರ ಸಮ್ಮುಖದಲ್ಲಿ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾದರು.

ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಗೆಲುವಿಗೆ ಶ್ರಮಿಸುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಯುವ ಮೋರ್ಚಾದ ಉಪಾಧ್ಯಕ್ಷ ಜಿ.ಎಸ್.ಶ್ಯಾಮ್, ಮಾಯಕೊಂಡ ಬಿಜೆಪಿ ಹಿರಿಯ ಮುಖಂಡ ಬಿ.ಟಿ.ಸಿದ್ದಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಗೋ ಬ್ಯಾಕ್ ಮೋದಿ, ಪ್ರಜ್ವಲ್ ರೇವಣ್ಣ ಮಿತ್ರ ಮೋದಿಗೆ ಧಿಕ್ಕಾರ

## ಜಿಲ್ಲಾ ಕಾಂಗ್ರೆಸ್ ಕಪ್ಪು ಬಾವುಟ ತೋರಿಸಿ ಪ್ರತಿಭಟನೆ



ದಾವಣಗೆರೆ, ಏ28- ನಗರಕ್ಕೆ ಇಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆಗಮಿಸುತ್ತಿದ್ದಂತೆಯೇ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹಾಗೂ ಎನ್‌ಎಸ್‌ಯುಐ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ, 'ಗೋ ಬ್ಯಾಕ್ ಮೋದಿ', 'ಪ್ರಜ್ವಲ್ ರೇವಣ್ಣ ಮಿತ್ರ ಮೋದಿ'ಗೆ ದಿಕ್ಕಾರವೆಂದು ಪ್ರತಿಭಟನೆ ಮಾಡುತ್ತಾ ಮೋದಿ ಕಾರ್ಯಕ್ರಮದಡೆಗೆ ಹೋಗಲು ಮುಂದಾದಾಗ ಪೊಲೀಸರು ಅವರನ್ನು ಬಂಧಿಸಿದ ಘಟನೆ ನಡೆಯಿತು.

ಪ್ರತಿಭಟನೆಯು ಶಾಮನೂರು ರಸ್ತೆಯಿಂದ ಆರಂಭಿಸಿ, ಹದಡಿ ರಸ್ತೆಯ ಅಂಬೇಡ್ಕರ್ ವೃತ್ತದವರೆಗೆ ಬರುತ್ತಿದ್ದಂತೆಯೇ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ, ವಿದ್ಯಾನಗರ ಪೊಲೀಸ್ ಠಾಣೆಗೆ ಕರೆದೊಯ್ದು ನಂತರ ಬಿಡುಗಡೆ ಮಾಡಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ಸದಸ್ಯರಾದ ಕೆ.ಚಮನ್ ಸಾಬ್, ಎ. ನಾಗರಾಜ್, ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಅಲಿ ರೆಹಮತ್ ಪೈಲ್ವಾನ್, ಗಿರಿಧರ್ ಸತಾಲ್, ಕೆ. ಎಂ.ಮಂಜುನಾಥ್, ಜಮೀರ್, ಮಾರುತಿ ಹರಿಹರ, ಡಿ.ಎಲ್.ನಾಗರಾಜ್, ತಾಹೀರ್, ಸಮೀರ್, ರೆಹಮಾನ್ ಇನ್ನೂ ಮುಂತಾದವರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಲಾಯಿತು.

# ಕಾಪಾಡಿದ ಪಕ್ಷಕ್ಕೆ ಬೆಂಬಲಿಸಿ

**(3ನೇ ಪುಟದಿಂದ)** ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಎಚ್. ಆಂಜನೇಯ ಸಮಾಜ ಕಲ್ಯಾಣ ಮಂತ್ರಿ ಆಗಿದ್ದರು. ಆಗ ದಲಿತರ ಅಭಿವೃದ್ಧಿ ಆರಂಭವಾಯಿತು. ಈ ನಿಟ್ಟಿನಲ್ಲಿ ಪಕ್ಷದ ಋಣ ತೀರಿಸಲು ಕಾಂಗ್ರೆಸ್‌ಗೆ ಮತ ಹಾಕುವಂತೆ ಮನವಿ ಮಾಡಿದರು. ಪಾಲಿಕೆ ಸದಸ್ಯ ಉದಯ ಕುಮಾರ್, ನಿಂಗಪ್ಪ, ಎನ್.ನೀಲಗಿರಿಯಪ್ಪ, ಎಲ್.ಡಿ.ಗೋಣೆಪ್ಪ, ಸೋಮ್ಲಾಪುರ ಹನುಮಂತಪ್ಪ, ಸಿದ್ದನೂರು ಪ್ರಕಾಶ್, ಜಿಪಂ ಮಾಜಿ ಉಪಾಧ್ಯಕ್ಷ ಶಿವಣ್ಣ, ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ, ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ, ಬಿ.ಎಂ. ಹನುಮಂತಪ್ಪ, ಮಂಜುಳಮ್ಮ, ನಗರ ಸಭಾ ಮಾಜಿ ಸದಸ್ಯ ಮಲ್ಲಿಕಾರ್ಜುನ, ನಿವೃತ್ತ ಡಿವೈಎಸ್ಪಿ ರವಿ ನಾರಾಯಣ್, ಬಗರ್ ಹುಕ್ಕುಂ ಸಮಿತಿಯ ಶೇಖರಪ್ಪ ಇದ್ದರು.

## ನಗರದಲ್ಲಿ ಇಂದು ಸಂಗೀತ ಸುಧೆ

ಮತದಾನೋತ್ಸವದ ಅಂಗವಾಗಿ ಸಂಗೀತ ಸುಧೆಯನ್ನು ನಿಟ್ಟುವಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.

## ಸಾರ್ವಜನಿಕ ಪ್ರಕಟಣೆ

**ಮೀನಾಬಾಯಿ ಕೋಂ ಶ್ರೀನಿವಾಸರಾವ್**, ವಯಸ್ಸು ಸುಮಾರು 58 ವರ್ಷ, ಗೃಹಿಣಿ, ಡೋರ್ ನಂ. 3509/ಎ-53, ಕುಂದುವಾಡ ರಸ್ತೆ, ಬಸವೇಶ್ವರ ಲೇಔಟ್, ನೀರಿನ ಟ್ಯಾಂಕ್ ಹತ್ತಿರ, ದಾವಣಗೆರೆ ನಿವಾಸಿಯಾದ ನಾನು ನೀಡುತ್ತಿರುವ ಪತ್ರಿಕಾ ಪ್ರಕಟಣೆ ಏನೆಂದರೆ :

ನನ್ನ ತಂದೆಯಾದ **ಪಿ. ಗೋವಿಂದಪ್ಪನವರು** ತಮಗೆ ಸೇರಿದ ರಿ.ಸರ್ವೆ ನಂ. 114/1 ರಲ್ಲಿ 3 ಎಕರೆ 8 ಗುಂಟೆ ದಾವಣಗೆರೆಗೆ ಸೇರಿದ ಜಮೀನನ್ನು ಭೂ ಪರಿವರ್ತನೆ ಮಾಡಿಸಿ, ಅದರಲ್ಲಿ 49 ನಿವೇಶನಗಳನ್ನಾಗಿ ವಿಂಗಡಿಸಿರುತ್ತಾರೆ. ಪಿ. ಗೋವಿಂದಪ್ಪ ಜೀವಂತ ಇರುವ ತನಕ ಆತನ ಕುಟುಂಬದಲ್ಲಿ ಯಾವುದೇ ಹಂಚಿಕೆಯಾಗಿರುವುದಿಲ್ಲ. ಪಿ. ಗೋವಿಂದಪ್ಪ ತನ್ನ ಜೀವಿತ ಕಾಲದಲ್ಲಿ ಅವರ ಹೆಸರಿಗೆ ಇದ್ದ ಆಸ್ತಿಯ ಬಗ್ಗೆ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ. ನನ್ನ ತಂದೆಯಾದ ಪಿ. ಗೋವಿಂದಪ್ಪನವರು ಯಾವುದೇ ದಾಖಲೆ ಮಾಡದೇ ದಿನಾಂಕ : 25.10.1993 ರಂದು ಮರಣ ಹೊಂದಿರುತ್ತಾರೆ. ನನ್ನ ತಾಯಿ ಸೀತಮ್ಮ ದಿನಾಂಕ : 23.3.2019 ರಂದು ತೀರಿಕೊಂಡಿರುತ್ತಾರೆ. ಪಿ. ಗೋವಿಂದಪ್ಪ ಹಾಗೂ ಸೀತಮ್ಮನಿಗೆ ಪಿ.ಜಿ. ನಾಗರಾಜ, ಸುಧಾಬಾಯಿ ಹಾಗೂ ನಾನು ಮಕ್ಕಳಿದ್ದು ಹಿಂದೂ ವಾರಸಾ ಕಾಯ್ದೆ ಪ್ರಕಾರ ಮೇಲೆ ಹೇಳಿದ ಮೂವರಿಗೂ ಷೆಡ್ಯೂಲ್ ಆಸ್ತಿ ಬಂದಿರುತ್ತದೆ. ಹಾಗಾಗಿ ದಾವಣಗೆರೆಯ ರಿ.ಸರ್ವೆ ನಂ. 114/1 ರಲ್ಲಿ ಆದ 1 ರಿಂದ 49ನೇ ನಿವೇಶನಗಳಿಗೆ ನಾನು, ಸುಧಾಬಾಯಿ ಹಾಗೂ ಪಿ.ಜಿ. ನಾಗರಾಜ ಇವರುಗಳು ಜಂಟಿ ಮಾಲೀಕರಾಗಿ ಜಂಟಿ ಸ್ವಾಧೀನಾನುಭವದಲ್ಲಿರುತ್ತದೆ. ನಾನು ಪಿ.ಜಿ. ನಾಗರಾಜನಿಗೆ ಕೆಳ ಕಾಣಿಸಿದ ಆಸ್ತಿಯನ್ನು ವ್ಯವಹರಿಸುವ ಬಗ್ಗೆ ಅಧಿಕಾರ ನೀಡಿರುವುದಿಲ್ಲ. ಪಿ.ಜಿ. ನಾಗರಾಜ ಕೆಳ ಕಾಣಿಸಿದ ಆಸ್ತಿಗೆ ಸಂಪೂರ್ಣ ಮಾಲೀಕನಲ್ಲ. ಕೆಳ ಕಾಣಿಸಿದ ಆಸ್ತಿಯಲ್ಲಿ ನನಗೂ ಸಹ 1/3 ಭಾಗ ಹಿಸ್ಸೆ ಇರುತ್ತದೆ. ಪಿ.ಜಿ. ನಾಗರಾಜನಿಗೆ ಕೆಳ ಕಾಣಿಸಿದ ಆಸ್ತಿಯನ್ನು ಪರಭಾರೆ ಮಾಡುವ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ. ಹೀಗಿದ್ದರೂ ಸಹ ಪಿ.ಜಿ. ನಾಗರಾಜನು ಕೆಳ ಕಾಣಿಸಿದ ಆಸ್ತಿಯಲ್ಲಿ ನನಗೆ ಹಿಸ್ಸೆ ಇರುವ ವಿಷಯ ಗೊತ್ತಿದ್ದರೂ ನನ್ನ ಹಿಸ್ಸೆ ಎತ್ತಿ ಹಾಕುವ ಉದ್ದೇಶದಿಂದ ಕೆಳ ಕಾಣಿಸಿದ ನಿವೇಶನಗಳಲ್ಲಿ ಕೆಲವು ನಿವೇಶನಗಳನ್ನು ನನಗೆ ತಿಳಿಯದೇ ಹಾಗೆ ಮಾರಾಟ ಮಾಡಿರುತ್ತಾರೆ ಹಾಗೂ ಮತ್ತೆ ಕೆಲವು ನಿವೇಶನಗಳನ್ನು ಮಾರಾಟ ಮಾಡುವ ಹುನ್ನಾರದಲ್ಲಿದ್ದಾರೆ.


ನನ್ನ ತಂದೆಗೆ ನಿವೇಶನಗಳಲ್ಲದೇ ಆಸ್ತಿ ನಂ. 804/1 ಮತ್ತು 804/1ಎ ರಿಂದ 1-7 ರಲ್ಲಿ ಕಟ್ಟಿರುವ ನೆಲ ಅಂತಸ್ತಿನ ವಾಣಿಜ್ಯ ಮಳಿಗೆ ಹಾಗೂ ಮೊದಲನೇ ಅಂತಸ್ತು ಕಟ್ಟಿರುವ ಮನೆ ಸಹ ಇದ್ದಿತು. ಸದರಿ ಮನೆಯು ಪಿಸಾಳೆ ಕಾಂಪೌಂಡ್, ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ಇರುತ್ತದೆ. ಡೋರ್ ನಂ. 804/1, ಮತ್ತು 804/1ಎ ರಿಂದ 1-7ರ ಆಸ್ತಿಯ ಅಳತೆ 57 ಅಡಿ x 130 ಅಡಿ ಇರುತ್ತದೆ. ಪಿ. ಗೋವಿಂದಪ್ಪ ತೀರಿಕೊಂಡ ನಂತರ ನಾನು, ಪಿ.ಜಿ. ನಾಗರಾಜ ಹಾಗೂ ಸುಧಾಬಾಯಿ ಮೇಲೆ ಹೇಳದ ಆಸ್ತಿಗೆ ಜಂಟಿ ಮಾಲೀಕರಾಗಿರುತ್ತೇವೆ. ಈ ಆಸ್ತಿಯನ್ನು ಸಹ ಪಿ.ಜಿ. ನಾಗರಾಜ ಪರಭಾರಣೆ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಹಾಗಾಗಿ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಗಳಲ್ಲಿ ನನಗೂ ಸಹ 1/3 ಭಾಗದ ಹಿಸ್ಸೆ ಇರುತ್ತದೆ. ನನ್ನ ಹಿಸ್ಸೆಯ ಆಸ್ತಿಯನ್ನು ಪಿ.ಜಿ. ನಾಗರಾಜ ಇವರಿಗೆ ಮಾರಾಟ ಮಾಡುವ ಯಾವುದೇ ಹಕ್ಕು, ಅಧಿಕಾರ ಹಾಗೂ ಹಿತಾಸಕ್ತಿ ಇರುವುದಿಲ್ಲ. ಹಾಗಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕೆಳ ಕಾಣಿಸಿದ ಷೆಡ್ಯೂಲ್ ಆಸ್ತಿಗಳ ಬಗ್ಗೆ ಪಿ.ಜಿ. ನಾಗರಾಜ ಇವರೊಡನೆ ಯಾರೂ ವ್ಯವಹರಿಸಬಾರದು. ಒಂದು ವೇಳೆ ಸಾರ್ವಜನಿಕರು ಯಾರಾದರೂ ಪಿ.ಜಿ. ನಾಗರಾಜ ಒಡನೆ ವ್ಯವಹರಿಸಿದ್ದೇ ಆದರೆ ನಾನು ಜವಾಬ್ದಾರಳಲ್ಲ ಹಾಗೂ ಮುಂದೆ ಆಗುವ ಅಪಾಯಗಳಿಗೆ ನೀವೇ ಜವಾಬ್ದಾರರಾಗುತ್ತೀರಿ ಎಂದು ತಿಳಿಸುವ ಸಲುವಾಗಿ ನೀಡುತ್ತಿರುವ ಪತ್ರಿಕಾ ಪ್ರಕಟಣೆ.

**ಷೆಡ್ಯೂಲ್** : 1) ನಿವೇಶನ ನಂ. 1 ರಿಂದ 49 ಡೋರ್ ನಂ. 3423/1 ರಿಂದ 49, ರಿ.ಸರ್ವೆ ನಂ. 114/1 ದಾವಣಗೆರೆಯಲ್ಲಿ ಆದ ನಿವೇಶನಗಳು, ಈಗ ಶಂಕರ ವಿಹಾರ್ ಬಡಾವಣೆ, ದಾವಣಗೆರೆ ಸಿಟಿ ವ್ಯಾಪ್ತಿಯಲ್ಲಿ ಬರುತ್ತವೆ.

2) ಡೋರ್ ನಂ. 804/1 ಹಾಗೂ 804/ಎ ರಿಂದ 1-7 ನೆಲ ಅಂತಸ್ತು ಹಾಗೂ ಮೊದಲನೇ ಅಂತಸ್ತು ವಾಸದ ಕಟ್ಟಡ ಇದ್ದು, ಒಟ್ಟು ನಿವೇಶನದ ಅಳತೆ 57 ಅಡಿ x 130 ಅಡಿ ಇದ್ದು. ಸದರಿ ಆಸ್ತಿ ಪಿಸಾಳೆ ಕಾಂಪೌಂಡ್, ಪಿ.ಬಿ. ರಸ್ತೆ, ದಾವಣಗೆರೆ ಸಿಟಿ.

ಸ್ಥಳ : ದಾವಣಗೆರೆ
ದಿನಾಂಕ :

**ಪ್ರಕಟಣೆ ನೀಡುವವರ ಸಹಿ**





## ಉಜ್ಜಯಿನಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ತೇರುಗಾಲಿ ಹೊರಗೆ



ಕೊಟ್ಟೂರು, ಏ. 28 - ಉಜ್ಜಿನಿಯ ಉಜ್ಜಯಿನಿ ಜಗದ್ಗುರು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ತೇರು ಗಾಲಿಯನ್ನು ಭಾನುವಾರ ಸಕಲ ವಾದ್ಯ ಮೇಳಗಳೊಂದಿಗೆ ಭಕ್ತರ ಜಯ ಘೋಷದೊಂದಿಗೆ ರಥವನ್ನು ತೇರು ಬಯಲುವರಿಗೆ ಎಳೆಯಲಾಯಿತು. ಜಗದ್ಗುರು ಶ್ರೀ ಮರುಳ ಸಿದ್ದೇಶ್ವರ ಸ್ವಾಮಿಯ ರಥೋತ್ಸವವು ಮೇ 12 ಭಾನುವಾರ ನಡೆಯಲಿದ್ದು, ಶಿಖರಕ್ಕೆ ತೈಲಾಭಿಷೇಕವು ಮೇ 13 ರಂದು ನಡೆಯಲಿದೆ. ಮೇ 17 ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯಲಿವೆ.

ಈ ಸಂದರ್ಭದಲ್ಲಿ ಗ್ರಾಮದ ಸಮಸ್ತ ಭಕ್ತರು ಹಾಗೂ 9 ಪಾದಗಟ್ಟೆಗಳ ಭಕ್ತಾದಿಗಳು ಸುತ್ತಮುತ್ತಲಿನ ಹಳ್ಳಿಯ ಭಕ್ತಾದಿಗಳು ಇದ್ದರು.

# ಅಭಿವೃದ್ಧಿಗೆ ನಾವು ಎಂಬುದನ್ನು ತೋರಿಸಿದ್ದೇವೆ : ಎಸ್ಸೆಸ್

ದಾವಣಗೆರೆ, ಏ.28 ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿದ್ದು, ಈ ಭಾಗಕ್ಕೆ ನಾಲ್ಕು ಬಾರಿ ಸಂಸದರಾಗಿರುವವರ ಕೊಡುಗೆ ಏನು ಇಲ್ಲ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ವ್ಯಾಪ್ತಿಯ ದಾವಣಗೆರೆ ತಾಲ್ಲೂಕಿನ ಹನುಮಂತಾಪುರ ಗ್ರಾಮದಿಂದ ಇಂದು ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು, ಹಳೇಬೆಳವನೂರು, ತುರ್ಚಘಟ್ಟ, ಹೊಸನಾಯ್ಕನಹಳ್ಳಿ, ಕೈದಾಳೆ, ಗಿರಿಯಾಪುರ, ಕುಕ್ಕುವಾಡ, ಹೊಸಕೋಳೇನಹಳ್ಳಿ ಮತ್ತು ಹಳೇಕೋಳೇನಹಳ್ಳಿ, ನಾಗರಸನಹಳ್ಳಿ, ಜಡಗನಹಳ್ಳಿ, ಬಲ್ಲೂರು, ಶಿರಗಾನಹಳ್ಳಿ, ಕನಗೊಂಡನಹಳ್ಳಿ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಅವರು ಮಾತನಾಡಿದರು.

ಶಾಮನೂರು ಶಿವಶಂಕರಪ್ಪ ಅವರು ಈ ಭಾಗದ ಶಾಸಕರಾಗಿ ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಇನ್ನಷ್ಟು ಸಣ್ಣಪುಟ್ಟ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಆದರೆ ನಾಲ್ಕು ಬಾರಿ ಸಂಸದರಾಗಿರುವವರು ಇಲ್ಲಿ ಒಮ್ಮೆಯಾದರೂ ಬಂದು ಈ ಭಾಗದ ಜನರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

ಈ ಭಾಗದಲ್ಲಿ ಶಾಮನೂರು ಶಿವಶಂಕರಪ್ಪ ನವರು ಅಭಿವೃದ್ಧಿ ಮಾಡದಿದ್ದರೆ ಸಂಸದರನ್ನು ನೆಚ್ಚಿ ಕುಳಿತಿದ್ದರೆ, ಜನರು ಸಂಕಷ್ಟದ ಪರಿಸ್ಥಿತಿ ಅನುಭವಿಸಬೇಕಾಗುತ್ತಿತ್ತು. ಇಂತಹ ಸಂಸದ ರನ್ನು ಮನೆಗೆ ಕಳುಹಿಸಬೇಕಿದೆ ಎಂದು ಅವರು ಕರೆ ನೀಡಿದರು.



ದಾವಣಗೆರೆ ದಕ್ಷಿಣ ಕ್ಷೇತ್ರದ ಗ್ರಾಮಾಂತರ ಪ್ರದೇಶ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದು, ಎಲ್ಲಾ ಕ್ಷೇತ್ರಕ್ಕೂ ಅನುದಾನ ಕಲ್ಪಿಸಲಾಗಿದೆ. ಸರ್ಕಾರಿ ಶಾಲೆಗಳನ್ನೂ ಸಹ ಅಭಿವೃದ್ಧಿ ಪಡಿಸಲಾಗಿದ್ದು, ಇನ್ನಷ್ಟು ಅಭಿವೃದ್ಧಿಯನ್ನು ಕೇಂದ್ರ ದಿಂದ ಅನುದಾನ ತಂದು ಮಾಡಲಾಗುವುದು ಎಂದರು.

ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ, ದಾವಣಗೆರೆ ದಕ್ಷಿಣ ಕ್ಷೇತ್ರದ ಗ್ರಾಮಾಂತರ ಪ್ರದೇಶದವರು ಸದಾ ನಮ್ಮನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಈ ಬಾರಿ ಲೋಕಸಭೆಗೆ ಪ್ರಭಾ ಮಲ್ಲಿಕಾರ್ಜುನ್ ಅವರು ಸ್ಪರ್ಧಿಸಿದ್ದು, ಹೆಚ್ಚಿನ ಬೆಂಬಲ ನೀಡಬೇಕೆಂದು ಕರೆ ನೀಡಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ. 122 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸು ವುದು, ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಜಿ.ಸಿ.ನಿಂಗಪ್ಪ, ಆರನೇಕಲ್ಲು ಮಂಜಣ್ಣ, ಕುಕ್ಕುವಾಡ ಮಂಜುನಾಥ್, ಹದಡಿ ಹಾಲಪ್ಪ, ತುರ್ಚಘಟ್ಟದ ಬಸವರಾಜಪ್ಪ, ಅನ್ವರ್, ರಿಯಾಜ್ ಅಹ್ಮದ್, ಸತೀಶ್, ಉಜ್ಜಪ್ಪ, ಚಂದ್ರಶೇಖರಪ್ಪ, ಮಹೇಂದ್ರ, ಗಿರೀಶ್, ಶಿರಮಗೊಂಡನಹಳ್ಳಿ ರುದ್ರೇಶ್, ಚಂದ್ರಪ್ಪ, ಶಶಿ, ಕೈದಾಳೆ ಮಲ್ಲಿಕಾರ್ಜುನ್, ಹಳೇ ಬಿಸಲೇರಿ ಗಂಗಣ್ಣ, ಕುಬೇರ, ಎ.ಕೆ.ನೀಲಪ್ಪ, ಶಿರಮ ಜಾಂಬವಂತ, ಸಂತೋಷ್, ದೇವೇಂದ್ರಪ್ಪ, ಹನುಮಂತಪ್ಪ, ಶಂಕರ್, ಲಿಂಗೇಶ್, ರಾಜಣ್ಣ, ಕರಿಬಸಪ್ಪ, ಪರಮೇಶಪ್ಪ, ತಿಪ್ಪೇಶ್, ಶಂಭಣ್ಣ, ಅಜ್ಜಣ್ಣ, ಸಾಗರ್, ಜರೀಕಟ್ಟೆ ಹನುಮಂತಪ್ಪ, ಬಟ್ಲಕಟ್ಟೆ ಬೀರೇಶ್, ಮಹೇಂದ್ರ, ಚನ್ನಬಸಪ್ಪ, ಸಿದ್ದಪ್ಪ, ಬಲ್ಲೂರು ಸ್ವಾಮಿ, ದೇವೇಂದ್ರಪ್ಪ, ಬಸವರಾಜ್, ಚಿಕ್ಕಣ್ಣ, ಸಿದ್ದಪ್ಪ, ಮಹಾಂತೇಶ್, ಆರನೇಕಲ್ಲು ಹನುಮಂತಪ್ಪ, ತಿಪ್ಪೇಶ್, ಮಹಾದೇವಪುರ ಕೃಷ್ಣ, ಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

### ಪ್ರಭಾ ಮಲ್ಲಿಕಾರ್ಜುನ್ ನಿಮ್ಮ ಮತ ವ್ಯರ್ಥವಾಗದಂತೆ ಕೆಲಸ ಮಾಡುವರು





**ಪ್ರಧಾನಿ ಮೋದಿಗೆ ಶ್ರೀ ರಾಮನ ಬೆಳ್ಳಿಯ ಮೂರ್ತಿ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಬಂಜಾರ ಸಂಸ್ಕೃತಿ ಬಿಂಬಿಸುವ ಶಾಲು ನೀಡಿದರು. ಹಾವೇರಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಅವರು ರುದ್ರಾಕ್ಷಿಯ ಹಾರ ತೊಡಿಸಿದರು. ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕಮಲದ ಹೂವಿರುವ ಪೇಟ ತೊಡಿಸಿದರು. ಜೆಡಿಎಸ್‌ನ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹಾಗೂ ಜೆಡಿಎಸ್ ಮುಖಂಡ ಚಿದಾನಂದಪ್ಪ ಅವರು ಶ್ರೀ ಹರಿಹರೇಶ್ವರ ಮೂರ್ತಿಯನ್ನು ನೀಡಿದರು. ಇದೇ ವೇಳೆ ಪ್ರಧಾನಿಗೆ ಶ್ರೀ ರಾಮನ ಬೆಳ್ಳಿಯ ಮೂರ್ತಿ ನೀಡಲಾಯಿತು.

## ಮದುವೆ ಊಟ ಮಾಡಿ ಅಸ್ವಸ್ಥ : ಸಿ.ಜಿ.ಆಸ್ಪತ್ರೆಗೆ ಡಾ. ಪ್ರಭಾ ಭೇಟಿ



ದಾವಣಗೆರೆ, ಏ. 28 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮತ್ತು ಸಮರ್ಥ ಶಾಮನೂರು ಅವರು ಶನಿವಾರ ಸಿ.ಜಿ. ಆಸ್ಪತ್ರೆಗೆ ಭೇಟಿ ನೀಡಿ, ಹರಪನಹಳ್ಳಿ ತಾಲೂಕಿನ ಸಿಂಗ್ರಿಹಳ್ಳಿ ತಾಂಡಾದಲ್ಲಿ ಮದುವೆ ಊಟ ಮಾಡಿ ಅಸ್ವಸ್ಥರಾದ 22 ಮಕ್ಕಳು ಸೇರಿ 96 ಜನರ ಆರೋಗ್ಯ ವಿಚಾರಿಸಿದರು.

## ಲೈಂಗಿಕ ದೌರ್ಜನ್ಯ ಪ್ರಕರಣ : ರೇವಣ್ಣ, ಪ್ರಜ್ವಲ್ ವಿರುದ್ಧ ಎಫ್‌ಐಆರ್

ಹಾಸನ, ಏ. 28 - ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ನಗರ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿದೆ.

ಮಹಿಳೆಯೊಬ್ಬರು ನೀಡಿದ ದೂರನ್ನು ಆಧರಿಸಿ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಜ್ವಲ್ ರೇವಣ್ಣ ಅವರ ತಂದೆ, ಜೆಡಿಎಸ್ ಶಾಸಕ ಹೆಚ್. ಡಿ. ರೇವಣ್ಣ ಅವರ ವಿರುದ್ಧವೂ ಎಫ್ ಐಆರ್ ದಾಖಲಿಸಲಾಗಿದೆ.



ಹಾಸನ ಅಶ್ಲೀಲ ವಿಡಿಯೋಗಳ ಪೆನ್ ಡ್ರೈವ್ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿ ಅಧಿಕಾರಿಗಳನ್ನು ನೇಮಿಸಿದೆ. ಐಪಿಎಸ್ ಅಧಿಕಾರಿಗಳಾದ ಬಿ. ಕೆ. ಸಿಂಗ್, ಸುಮನ್ ಡಿ. ಪನ್ನೇಕರ್ ಮತ್ತು ಸೀಮಾ ಲಾಟ್ಕರ್ ಅವರನ್ನು ತನಿಖೆಗೆ ನೇಮಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಮಹಿಳಾ ಸದಸ್ಯರು ಮತ್ತು ಮಹಿಳಾ ಪರ ಸಂಘಟನೆ ಸದಸ್ಯರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

# ಬಿರುಬೇಸಿಗೆಯಲ್ಲಿ ಮಜ್ಜಿಗೆ ದಾನ ಪುಣ್ಯದ ಕೆಲಸ



ದಾವಣಗೆರೆ, ಏ. 28- ಎಲ್ಲ ದಾನಕ್ಕಿಂತ ಶ್ರೇಷ್ಠ ದಾನ ಅನ್ನದಾನ. ಅನ್ನದಾನದಲ್ಲೇ ಒಂದಾದ ಮಜ್ಜಿಗೆ ದಾನವನ್ನು ಮಾಡುವುದು ಪುಣ್ಯದ ಕೆಲಸ. ಇಂತಹ ಕೆಲಸವನ್ನು ಕರುಣಾ ಟ್ರಸ್ಟ್‌ನಿಂದ ಸತತ 8 ವರ್ಷಗಳಿಂದ ಮಾಡುತ್ತಾ ಬಂದಿದೆ ಎಂದು ಪ್ರೊ. ಬಸವರಾಜ್ ಶ್ಲ್ಯಾಘಿಸಿದರು.

ನಗರದ ಜಯದೇವ ಸರ್ಕಲ್, ಚಿಗಟೇರಿ ಜಿಲ್ಲಾ ಆಸ್ಪತ್ರೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ ಸತತವಾಗಿ ಒಂದು ತಿಂಗಳ ಮಜ್ಜಿಗೆ ಮತ್ತು ನೀರಿನ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಮುಕ್ತಾಯ ಸಮಾರಂಭದಲ್ಲಿ ಉಪಸ್ಥಿತರಿದ್ದ ಅವರು ಮಾತನಾಡಿದರು.

ಉಪಕಾರ ಸ್ಮರಣೆ ಮಾನವ ಸಂಸ್ಕೃತಿಯ ಒಂದು ಲಕ್ಷಣ. ಆದ್ದರಿಂದ ಈ ಸತ್ಕಾರ್ಯಕ್ಕೆ ಶ್ರಮವಹಿಸಿದ ಎಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸುವುದು ನಮ್ಮ ಕರ್ತವ್ಯ ಎಂದರು.

ಟ್ರಸ್ಟ್‌ನ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಮ್ಮ ತಮ್ಮ ಕೆಲಸಗಳಿಗಾಗಿ ಹಳ್ಳಿಯಿಂದ ನಗರಕ್ಕೆ ಬಂದಂತಹ ಬಡವರಿಗೆ ಒಂದು ತಿಂಗಳು ಮಜ್ಜಿಗೆ ವಿತರಿಸಿದ್ದು ಸಂತಸದ ವಿಷಯ. ಹಿಂದೆಲ್ಲಾ ಅಲ್ಲಲ್ಲಿ ಅರವಟ್ಟಿಗೆಗಳನ್ನು ಇಟ್ಟು, ದಣಿದು ಬಂದವರಿಗೆ ನೀರು ಕೊಡುತ್ತಿದ್ದರು. ಅದರಂತೆ ಕರುಣಾ ಟ್ರಸ್ಟ್ ಮಜ್ಜಿಗೆ ವಿತರಿಸುತ್ತಿರುವುದು ಶ್ಲ್ಯಾಘನೀಯ ಕಾರ್ಯವೆಂದು ಹರ್ಷ ವ್ಯಕ್ತಪಡಿಸಿದರು.

ದಾನಿಗಳಾದ ಸುನೀಲ್ ಮಾತನಾಡಿ, ನಾವು ಕೊಟ್ಟ ಹಣ ಸದುಪಯೋಗವಾಗಿದೆ ಎಂಬ ತೃಪ್ತಿ ನಮ್ಮಲ್ಲಿದೆ. ಮುಂದೆ ಟ್ರಸ್ಟ್‌ನ ಯಾವುದೇ ಸತ್ಕಾರ್ಯಗಳಿಗೆ ನಮ್ಮ ಸಹಾಯ, ಸಹಕಾರ ಖಂಡಿತಾ ಇದೆ. ಪ್ರತಿಯೊಬ್ಬರೂ ಟ್ರಸ್ಟಿನ ಉತ್ತಮ ಕಾರ್ಯಗಳಿಗೆ ಕೈ ಜೋಡಿಸೋಣ ಎಂದರು.

ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಸುಗಮವಾಗಿ ನಡೆಸಲು ಸಲಹೆ, ಮಾರ್ಗದರ್ಶನ, ಧನ ಸಹಾಯ, ಸಮಯದಾನ ನೀಡಿದಂತಹವರಿಗೆ ಕೃತಜ್ಞತೆ ಅರ್ಪಿಸಿದರು. ಮಧುಸೂದನ್ ಸ್ವಾಗತಿಸಿದರು.






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas